ಬೆಲೆ ರೂ.2.50 WPP No. SK/MNG/WPP/69
D.O.P - 15th of every month from Udupi Sorting Office



Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in

RAMDEV ENTERPRISES
"Ramdev", Opp. Balaganapathi Temple, Padubidri-574111, Udupi Dist.
Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists


# ಶ್ರೀ ಶಾರದಾ


ಮಾಸಪತ್ರಿಕೆ – 15 ಸೆಪ್ಟೆಂಬರ್ 2013

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-13 ಸಂಚಿಕೆ-9 ಪುಟಗಳು-10 Registered Under No.J/UDP/1260/2012-2014 Dated from 01-01-2012 to 31-12-2014.


## ದೇವರ ಮೇಲೆ ಭಕ್ತಿ ಮತ್ತು ಗುರುಗಳ ಮೇಲೆ ವಿಶ್ವಾಸ ಮನುಷ್ಯನ ಕರ್ತವ್ಯ–ಶ್ರೀ ಭಾರತೀತೀರ್ಥರು



**ಚಾತುರ್ವಾಸ್ಯ ಕಾಲದಲ್ಲಿ ಜಗದ್ಗುರು ಶೃಂಗೇರಿ ಪೀಠಾಧೀಶ್ವರ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಭೇಟಿಗಾಗಿ ಸ್ಥಾನಿಕ ಸಮಾಜ ಬಾಂಧವರು ಜೊತೆಯಾಗಿ ದಿನಾಂಕ 25-08-2013ರ ಆದಿತ್ಯವಾರದಂದು ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಒಂದುಗೂಡಿದರು. ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಮಾಜ ಬಾಂಧವರು ಗುರುಗಳ ದರ್ಶನ ಪಡೆದು, ಹೊರೆಕಾಣಿಕೆ ಅರ್ಪಿಸಿ, ಪಾದಪೂಜೆ ಸಲ್ಲಿಸಿದರು.**

ಮಂಗಳೂರು ಸುಬ್ರಹ್ಮಣ್ಯಸಭೆ, ಪಡುಬಿದ್ರೆ, ಕಾರ್ಕಳ, ಬೆಳ್ತಂಗಡಿ, ಧರ್ಮಸ್ಥಳ, ಮೈಸೂರು, ಬೆಂಗಳೂರಿನಿಂದ ಆಗಮಿಸಿದ ಸಾವಿರಾರು ಸಮಾಜ ಬಾಂಧವರಿಗೆ ಜಗದ್ಗುರುಗಳು ಮಂತ್ರಾಕ್ಷತೆ ನೀಡಿ ಆಶೀರ್ವಚನ ಮಾಡಿದರು.

ಮೊದಲಿಗೆ ಶೃಂಗೇರಿ ಮಠದ ಧರ್ಮಾಧಿಕಾರಿ ಶ್ರೀ ಸತ್ಯಶಂಕರ ಬೊಳ್ಳಾವ ಪ್ರಸ್ತಾವನೆ ಮಾಡಿ, ಸಮಾಜದ ವಿವಿಧ ಸಂಘಗಳಿಂದ ಆಗಮಿಸಿ ಸಮಷ್ಠಿ ಭಿಕ್ಷೆ, ಹೊರಕಾಣಿಕೆ ನೀಡಿದ ಸಂಘಗಳ ಪರಿಚಯವನ್ನು ಶ್ರೀ ಗುರುಗಳಿಗೆ ನೀಡಿ ಅವರಿಂದ ಮಂತ್ರಾಕ್ಷತೆಯನ್ನು ಕೊಡಿಸಿದರು. ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥರು ಆಶೀರ್ವಚನದಲ್ಲಿ ಗಣಪತಿ ಹಬ್ಬದ ಹಿಂದಿನ ರವಿವಾರ ತಮ್ಮ ಅಪ್ಪಣೆಯಂತೆ ಸೇರಿರುವ ಸ್ಥಾನಿಕ ಸಮಾಜದವರು ತಪ್ಪದೆ ಗುರುಗಳು ಎಲ್ಲಿರುವರೋ ಅಲ್ಲಿ ಅವರ ದರ್ಶನ ಪಡೆದು ಕೃತಾರ್ಥರಾಗುತ್ತಿದ್ದಾರೆ. ಕಳೆದ ಬಾರಿ ಚೆನ್ನೈಯಲ್ಲಿರುವಲ್ಲಿಗೂ ತಾವು ಬಂದಿರುತ್ತೀರಿ. ಈ ಬಾರಿ ಶೃಂಗೇರಿಯಲ್ಲಿಯೇ ಆದುದರಿಂದ ಹೆಚ್ಚಿನವರಿಗೆ ಬರಲು ಅನುಕೂಲವಾಗಿರುತ್ತದೆ. ಮನುಷ್ಯನು ಭೂಮಿಗೆ ಬಂದ ಮೇಲೆ ಗುರುಗಳಲ್ಲಿ ವಿಶ್ವಾಸವನ್ನೂ, ಶ್ರೀದೇವರಲ್ಲಿ ಭಕ್ತಿಯನ್ನು ಇಡುವುದರಿಂದ ಆತನ ಜೀವನ ಸಾರ್ಥಕ್ಯವನ್ನು ಹೊಂದುತ್ತದೆ. ತಮ್ಮ ಪ್ರಿಯ ಶಿಷ್ಯರಾದ ನಿಮ್ಮ ಮೇಲೆ ನಮ್ಮ ಆಶೀರ್ವಾದ ಸದಾ ಇರುತ್ತದೆ ಎಂದು ನುಡಿದರು.

## ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಿನಿ ಕೆ.

2012ನೇ ಸಾಲಿನ ಅತ್ಯುತ್ತಮ ಶಿಕ್ಷಕಿ ರಾಷ್ಟ್ರ ಪ್ರಶಸ್ತಿಯನ್ನು ದಿನಾಂಕ: 05-09-2013 ರಂದು ಹೊಸದಿಲ್ಲಿಯಲ್ಲಿ ಮಾನ್ಯ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರಿಂದ ಪಡೆದ **ಶ್ರೀಮತಿ ಸರೋಜಿನಿ**ಯವರು ಗ್ರಾಮೀಣ ಪ್ರದೇಶದಲ್ಲಿ 41 ವರ್ಷಗಳ ಸುದೀರ್ಘವಾದ ಸೇವೆ ಸಲ್ಲಿಸಿದ ಅಪರೂಪದ ಶಿಕ್ಷಕಿ. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಕಾಂತಾವರ ಮೂಲದವರಾದ ಶ್ರೀಮತಿ ಸರೋಜಿನಿಯವರು ನಿವೃತ್ತ ಕನ್ನಡ ವಿದ್ವಾನ್ ಕಾಂತಾವರ ಕೆ. ಭೋಜರಾವ್ ಮತ್ತು ಸುಂದರಮ್ಮ ದಂಪತಿಯವರ ಪ್ರಥಮ ಪುತ್ರಿ ಹಾಗೂ ಮಂಗಳೂರಿನ MCFನಲ್ಲಿ Executive Director ಆಗಿರುವ ಶ್ರೀ ಕಾಂತಾವರ ಪ್ರಭಾಕರ ರಾಯರ ಸಹೋದರಿ. 1953ರಲ್ಲಿ ಜನಿಸಿದ ಸರೋಜಿನಿಯವರು ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಣವನ್ನು ಗಣಪತಿ ಹೈಸ್ಕೂಲ್ ಮತ್ತು ಫಿಶರೀಸ್ ಹೈಸ್ಕೂಲ್, ಪಡುಬಿದ್ರಿ ಇಲ್ಲಿ ಪೂರೈಸಿ ಮಂಗಳೂರು ತಾಲೂಕಿನ ಕಿನ್ನಿಕಂಬಳದ ರೋಸಮಿಸ್ತಿಕ ಬೇಸಿಕ್ ಟ್ರೈನಿಂಗ್ ಸ್ಕೂಲ್‌ನಲ್ಲಿ ಟಿ.ಸಿ.ಎಚ್. ಮುಗಿಸಿ 1972 ರಲ್ಲಿ ವೃತ್ತಿ ಜೀವನವನ್ನು ಮುಲ್ಕಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಬಪ್ಪನಾಡು ಇಲ್ಲಿ ಪ್ರಾರಂಭಿಸಿದರು. 1975 ರಲ್ಲಿ ವಿವಾಹಿತರಾಗಿ ಪುತ್ತೂರು ತಾಲೂಕಿನ ಮೇನಾಲ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡು 2007ರ ವರೆಗೆ ಅಲ್ಲೇ ಅಧ್ಯಾಪಕಿಯಾಗಿ ಸೇವೆ ಸಲ್ಲಿಸಿದರು. 2007ರಲ್ಲಿ ನನ್ಯ ಹಿರಿಯ ಪ್ರಾಥಮಿಕ ಶಾಲೆ, ಪುತ್ತೂರು ತಾಲೂಕು ಇಲ್ಲಿಗೆ ಮುಖ್ಯ ಗುರುಗಳಾಗಿ ಭಡ್ತಿಹೊಂದಿ ಅಲ್ಲಿ ಸೇವೆ ಸಲ್ಲಿಸಿ 2009ರಲ್ಲಿ ಮತ್ತೆ ಈ ಹಿಂದೆ




ಸುದೀರ್ಘ ಸೇವೆ ಸಲ್ಲಿಸಿದ ಮೇನಾಲ ದ.ಕ.ಜಿ.ಪಂಚಾಯತ್ ಉನ್ನತ ಹಿರಿಯ ಪ್ರಾಥಮಿಕ ಶಾಲೆಗೆ ವರ್ಗಾವಣೆಗೊಂಡು ಬಂದು ಮೇನಾಲ ಶಾಲೆಯಲ್ಲಿಯೇ ಒಟ್ಟು 37 ವರ್ಷಗಳ ಸೇವೆ ಸಲ್ಲಿಸಿ ದಿನಾಂಕ 30-06-2013ರಂದು ಸೇವಾ ನಿವೃತ್ತಿ ಹೊಂದಿದರು.

ಶ್ರೀಮತಿ ಸರೋಜಿನಿಯವರು ತಾನು ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಎಲ್ಲಾ ಶಾಲೆಗಳ ಕುಂದು ಕೊರತೆಗಳನ್ನು ನೀಗಿಸಿ ಶಾಲೆಗೆ ಮೂಲ ಭೂತ ಸೌಕರ್ಯವನ್ನು ಒದಗಿಸುವುದರಲ್ಲಿ ಸಾರ್ವಜನಿಕ ಮತ್ತು ಸರಕಾರದ ನೆರವನ್ನು ಪಡೆದು ವಿಶೇಷ ಶ್ರದ್ಧೆ ಮತ್ತು ಪ್ರಾಮಾಣಿಕತೆಯಿಂದ ಶ್ರಮಿಸಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ, ವಿಶಾಲವಾದ ಆಟದ ಮೈದಾನ ರಚನೆ, ನನ್ಯ ಮತ್ತು ಮೇನಾಲ ಶಾಲೆಯಲ್ಲಿ ರಂಗಮಂದಿರಗಳು, ಶಾಲೆಗೆ ರಸ್ತೆ ನಿರ್ಮಾಣ, ಸುವರ್ಣ ಜಲ ಕೊಳವೆಬಾವಿ, ನಳ್ಳಿ ನೀರಿನ ವ್ಯವಸ್ಥೆ, ಪೀಠೋಪಕರಣಗಳು, ತೆಂಗಿನ ತೋಟ, ತರಕಾರಿ ತೋಟ, ಶಾಲಾ ಪ್ರವೇಶ ದ್ವಾರ, ಶಾಲಾ ಕಂಪೌಂಡ್ ರಚನೆ


(7ನೇ ಪುಟಕ್ಕೆ....)


---

**ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಸಂತುಷ್ಟರಾಗುತ್ತಾರೆ**

ಯತ್ರ ನಾರಿಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ

### ಸ್ಥಾನಿಕ ಸಮಾಜದ ಅಪ್ರತಿಮ ಸಾಧಕಿ ಪೂಜ್ಯ ಮಾತೃಶ್ರೀಯವರಿಗೆ

**ವರ್ಷಾಂತಿಕದ ನೆನಪಿನ ಕಾಣಿಕೆ**

ಜನನ: 1929



ನಿಧನ: 17-10-2012

**ಕರ್ವಾಲು ಶ್ರೀಮತಿ ವನಜಾಕ್ಷಿ ಅಮ್ಮ**
(ದಿ। ಕರ್ವಾಲು ಕೃಷ್ಣರಾಯರ ಪತ್ನಿ)
ಕರ್ವಾಲು, ನೀರೆಬೈಲೂರು, ಕಾರ್ಕಳ ತಾಲೂಕು

ಕಡುಬಡತನದ ಬೇಗೆಯಲ್ಲಿ ಗಂಧದ ಕೊರಡಿನಂತೆ ತಮ್ಮ ದೇಹವನ್ನು
ತೇದು ಮಕ್ಕಳು, ಮೊಮ್ಮಕ್ಕಳನ್ನು ಸಾಕಿ ಸಲಹಿ ಹೊಂಬೆಳಕಿನ ತುತ್ತತುದಿಗೆ
ಏರಿಸಿದ ಮಾತೆಗೆ ಕೊಡುವ ಕಾಣಿಕೆ ಈ ಕೆಳಗಿನ 4 ಸೊಲ್ಲುಗಳು ಮಾತ್ರ !
ನೀನೆಲ್ಲಿ ನಡೆವೆ ದೂರಾ ! ಎಲ್ಲೆಲ್ಲು ಲೋಕವೇ !!
ಈ ಲೋಕವೆಲ್ಲ ಘೋರಾ ! ಎಲ್ಲೆಲ್ಲು ಶೋಕವೇ !!
ನಗುವಾಗ ಎಲ್ಲ ನೆಂಟರು ! ಅಳುವಾಗ ಯಾರೂ ಇಲ್ಲ !!
ಮುಳ್ಳಲ್ಲಿ ನಿನ್ನ ನಡೆಸಿ ! ನಲಿವಾ ನಗುವೇ ವಿಕಾರ !!
ನೆರಳನ್ನು ನೀಡುವಂತಹ ! ಮರವನ್ನೇ ಕಡಿವರೆಲ್ಲಾ !!
ನಿಸ್ವಾರ್ಥ ಜೀವಿಗಳಿಗೇ ! ಜಗದೇ ಕಹಿಯೇ ಅಪಾರ !!
ಅಪಕಾರವನ್ನೇ ಕಾಣುವೆ ! ಉಪಕಾರವನ್ನು ಕಾಣೆ !!
ಅನುರಾಗವಿಲ್ಲಿ ಇಲ್ಲವೇ ! ಮನದೇ ಇದುವೇ ವಿಚಾರ !!

ಶಂಕರನಾರಾಯಣ ರಾವ್ ಕರ್ವಾಲ್ (ಪುತ್ರ)
DGM, VT CORP PVT. LTD., BANGALORE

ಸಂಧ್ಯಾ ಎಸ್.ರಾವ್ (ಸೊಸೆ)

ಸುದರ್ಶನ್ ರಾವ್ ಕರ್ವಾಲ್ (ಮೊಮ್ಮಗ)
Commercial Pilot, Jet Airways, Bangalore

ಸಂಗೀತಾ ರಾವ್ ಕರ್ವಾಲ್ (ಮೊಮ್ಮಗಳು)
HR EXECUTIVE, Myntra.com, Bangalore

: Address :
Flat No.D-301, D-Block, ETA Garden Apartments, Magadi Road, Near Binny Mills, Bangalore - 560023. Mob. : 9449958151, 9342828168
E-mail : shankaranarayanarao@gmail.com

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ| ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ. -ಸಂಪಾದಕ ಮಂಡಳಿ

## ಚಿಂತನ

ಇತ್ತೀಚೆಗೆ ದಿನಪತ್ರಿಕೆಯಲ್ಲಿ ಬಂದ ಒಂದು ವರದಿ. ಮಹನೀಯನೊಬ್ಬ ಹೊಸ ವಿಗ್ರಹಗಳನ್ನು ಕೊಂಡು ಅದಕ್ಕೆ ಬೇಕಾದ ಕೆಲವು ಸಂಸ್ಕಾರಗಳನ್ನು ಮಾಡಿ 2-3 ತಿಂಗಳನಂತರ ಅದು ಪ್ರಾಚೀನ ವಿಗ್ರಹಗಳೆಂದು ಹೇಳಿ, ನಂಬುವಂತೆಮಾಡಿ ಮತ್ತೊಬ್ಬರಿಗೆ ಮಾರಾಟ ಮಾಡಿದನಂತೆ. ಕೇವಲ 3ಲಕ್ಷ ರೂ.ಗಳ ವಿಗ್ರಹಗಳನ್ನು 14ಲಕ್ಷ ರೂ.ಗಳಿಗೆ ಮಹಿಳೆಯೊಬ್ಬಳಿಗೆ ಮಾರಾಟ ಮಾಡಿ ಲಾಭ ಗಳಿಸಿಕೊಂಡನಂತೆ. ಕೆಲವು ಸಮಯದ ನಂತರ ಮೋಸದ ಅರಿವಾದ ಮಹಿಳೆ ಸ್ಥಳೀಯ ಪೋಲೀಸರಿಗೆ ದೂರು ನೀಡಿದಾಗ ಆ ವ್ಯಕ್ತಿಯನ್ನು ಪೋಲೀಸರು ಬಂಧಿಸಿದರಂತೆ.

ಪತ್ರಿಕೆಯ ವರದಿಯನ್ನು ನೋಡಿದಾಗ ಆತ ಮಾಡಿದ್ದು ಘೋರ ತಪ್ಪು ಎನ್ನುವಂತೆ ಕಾಣುತ್ತದೆ. ಆದರೆ ಆ ವಿಗ್ರಹಗಳನ್ನು ಪ್ರಾಚೀನ ವಿಗ್ರಹಗಳೆಂದು ಸುಳ್ಳು ಹೇಳಿದ್ದು ಮಾತ್ರಾ ಆತನು ಮಾಡಿದ ತಪ್ಪು ವಿನಃ ಉಳಿದಂತೆ ಆತನನ್ನು ಖಳನಾಯಕನೆಂಬಂತೆ ಚಿತ್ರಿಸಿರುವಂತೆ ಕಾಣುತ್ತದೆ. ಆತನಂತೆ ಅದೆಷ್ಟೋ ಜನ ಈ ರೀತಿಯ ವಂಚನೆ ಮಾಡಿದ ಉದಾಹರಣೆ ಗಳಿಲ್ಲವೇ?


ಹಳ್ಳಿಯಲ್ಲಿ ದನಗಳ ವಹಿವಾಟು ಮಾಡುವಾತ ದನಗಳನ್ನು ಕೊಂಡು ಕೇವಲ 4-5 ದಿನಗಳಲ್ಲಿ ಒಂದೆರಡು ಸಾವಿರ ರೂ. ಹೆಚ್ಚು ಹಣ ಸಿಕ್ಕಿದಾಗ ಬೇರೊಬ್ಬರಿಗೆ ಮಾರಾಟ ಮಾಡುವುದು, ಪೇಟೆಯಲ್ಲಿ ಮೊದಲು ಕೊಂಡ ಸ್ಥಳವನ್ನು ಕೇವಲ ಒಂದೆರಡು ವರ್ಷಗಳಲ್ಲಿ ಲಕ್ಷಗಟ್ಟಲೆ ಲಾಭದಲ್ಲಿ ಮಾರಾಟ ಮಾಡುವುದು.... ಇಂತಹ ಅದೆಷ್ಟೋ ಪ್ರಕರಣಗಳು ನಮಗೆಲ್ಲಾ ತಿಳಿದದ್ದೇ ಆಗಿದೆ.

ಇಷ್ಟಾಗಿಯೂ ಮೇಲಿನ ವ್ಯಕ್ತಿ ಮಾಡಿದ ವಂಚನೆಗೆ ಒಳಗಾದ ಮಹಿಳೆಯೂ ಅಪರಾಧಿಯೇ ತಾನೇ? ಏಕೆಂದರೆ ಇಂತಹ ಪ್ರಾಚೀನ ವಿಗ್ರಹಗಳನ್ನು ಈ ರೀತಿ ವ್ಯವಹರಿಸಿ ಕೊಂಡುಕೊಳ್ಳುವುದು, ಅದನ್ನು ಸಂಗ್ರಹಿಸಿ ಇಡುವುದು ರಾಷ್ಟ್ರೀಯ ಅಪರಾಧವಲ್ಲವೇ? ಆಕೆ ಪೋಲೀಸರಿಗೆ ದೂರು ನೀಡಿದಾಗಲೇ ಅವಳನ್ನು ಈ ಅಪರಾಧಕ್ಕಾಗಿ ಬಂಧಿಸಬೇಕಿತ್ತಲ್ಲವೇ? ಅದೇಕೋ ಈ ವಿಷಯದಲ್ಲಿ ಪತ್ರಿಕೆಗಳಾಗಲೀ, ಪೋಲೀಸರಾಗಲೀ, ಸಮಾಜವಾಗಲೀ ಧ್ವನಿ ಎತ್ತಿದಂತೆ ಕಾಣುವುದಿಲ್ಲ.

ಹಾಗೆಯೇ ಈ ವ್ಯಕ್ತಿಯು ತಾನು ಕೊಂಡ ಹೊಸ ವಿಗ್ರಹಗಳನ್ನು ಹಳೆಯ ವಿಗ್ರಹಗಳಂತೆ ಕಾಣಲು ಶ್ರಮ ವಹಿಸಿಲ್ಲವೇ? ವಿಗ್ರಹಕ್ಕೆ ಬೇಕಾದ ಸಂಸ್ಕಾರ ಮಾಡಿಲ್ಲವೇ? ಆದ್ದರಿಂದ ಕೇವಲ ಮೋಸ ಮಾಡುವುದಷ್ಟೇ ಅಪರಾಧವಲ್ಲ. ಮೋಸ ಹೋಗುವುದೂ ಅಪರಾಧವೆಂದು ತಿಳಿಯೋಣವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀ (ಪೂರ್ವಾಶ್ರಮದಲ್ಲಿ ಕೆ. ಆತ್ಮಾರಾಮ ಶಾಸ್ತ್ರೀ, ಬೆಂಗಳೂರು)

(ಹಿಂದಿನ ಸಂಚಿಕೆಯಿಂದ...)

ಅವಳಲ್ಲಿ ವಜ್ರನೆಂಬ ಮಗನು ಹುಟ್ಟಿದನು.(ಇವನು ಉಷೆಯ ಮಗನೆಂದು ಕೆಲವರು ಹೇಳುತ್ತಾರೆ) ಯಾದವರು ಪರಸ್ಪರ ಕಲಹದಲ್ಲಿ ನಾಶವಾದಗ ಉಳಿದುಕೊಂಡವನು ಇವನೊಬ್ಬನೇ. ವಜ್ರನ ಮಗನು ಪ್ರತಿಬಾಹು. ಪ್ರತಿಬಾಹುವಿನ ಮಗನು ಸುಬಾಹು. ಸುಬಾಹುವಿನ ಮಗನು ಶಾಂತಸೇನ, ಅವನಿಂದ ಶತಸೇನ ಹುಟ್ಟಿದನು. ಮುಂದೆ ಸಂತತಿ ಬೆಳೆಯಲಿಲ್ಲ. ಶ್ರೀಕೃಷ್ಣನ ಸಂತತಿಯನ್ನು ವರ್ಣಿಸಲಸದಳ. ಅವನ ಸಂತತಿಯ ಮಕ್ಕಳಿಗೆ ವಿದ್ಯೆ ಕಲಿಸಲು ಮೂರು ಕೋಟಿ ಎಂಬತ್ತೆಂಟು ಲಕ್ಷ ಆಚಾರ್ಯರಿದ್ದರಂತೆ. ಇದರಿಂದ ಭಗವಂತನ ಸಂತತಿಯ ವಿಸ್ತಾರವನ್ನು ಊಹಿಸಬಹುದು.

ಹಿಂದೆ ದೇವಾಸುರರ ಯುದ್ಧದಲ್ಲಿ ಮಡಿದ ದೈತ್ಯರೇ ಮನುಷ್ಯರಾಗಿ ಹುಟ್ಟಿದರು. ಅವರು ದರ್ಪೋದ್ಧತರಾಗಿ ಪ್ರಜೆಗಳನ್ನು ಪೀಡಿಸುತ್ತಿದ್ದರು. ಅವರ ಸಂಹಾರಕ್ಕಾಗಿಯೇ ಪರಮ ಪುರುಷನು ಶ್ರೀಕೃಷ್ಣನಾಗಿ ಅವತರಿಸಿದ್ದನು ಈ ಯಾದವರಲ್ಲಿ ಒಲಪ್ರಭೇದಗಳಿಂದ ನೂರಒಂದು ಕುಲಗಳಿದ್ದವು.

[ಮಹಾಭಾರತದಲ್ಲಿ ಶ್ರೀಕೃಷ್ಣನನ್ನು ಕುರಿತು ಬರೆದ ಎಲ್ಲಾಕಥೆಗಳ ವಿವರ ಭಾಗವತದಲ್ಲಿ ವರ್ಣಿತವಾಗಿಲ್ಲ. ಕೌರವ-ಪಾಂಡವರ ಕಲಹದಲ್ಲಿ, ಮುಂದೆ ಯುದ್ಧದಲ್ಲಿ ಅವನು ವಹಿಸಿದ ಪಾತ್ರದ ವರ್ಣನೆ ಇಲ್ಲಿಲ್ಲ. ಇಲ್ಲಿ ಉದ್ಧವನಿಗೆ ಉಪದೇಶಿಸುವ ಕೆಲವು ಆಧ್ಯಾತ್ಮಿಕ ವಿಚಾರಗಳು ಭಗದ್ಗೀತೆಯಲ್ಲೂ ಬಂದಿವೆ. ಆದರೆ ಭಗದ್ಗೀತೆಯ ಉಲ್ಲೇಖ ಇಲ್ಲಿಲ್ಲ.]

ಶ್ರೀಕೃಷ್ಣನು ಬಲರಾಮನೊಡಗೂಡಿ ದೈತ್ಯರನ್ನು,ದೈತ್ಯಕಲ್ಪರನ್ನು ಸಂಹರಿಸಿ ಭೂಮಿಯ ಭಾರವನ್ನು ಇಳಿಸಿದನು. ಇನ್ನೂ ದುರ್ಯೋಧನಾದಿ ದುಷ್ಟರು ಭೂಭಾರರಾಗಿ ಉಳಿದಿದ್ದರು. ಅವರನ್ನು ನಾಶಮಾಡುವ ಉದ್ದೇಶದಿಂದ ಭಗವಂತನು ಪಾಂಡವ- ಕೌರವರೊಳಗೆ ಯುದ್ಧವಾಗುವಂತೆ ಮಾಡಿದನು. ದುರ್ಯೋಧನನು ಕಪಟದ್ಯೂತದಿಂದ ಪಾಂಡವರನ್ನು ಸೋಲಿಸಿ ಕಾಡಿಗೆ ಹೋಗುವಂತೆ ಮಾಡಿದನು. ತುಂಬಿದ ಸಭೆಯಲ್ಲಿ ದ್ರೌಪದಿಯ ವಸ್ತ್ರಾಪಹರಣ ಮಾಡಿ ಪಾಂಡವರ ಕ್ರೋಧವನ್ನು ಭುಗಿಲೆಬ್ಬಿಸಿದನು. ಇದರಿಂದಾಗಿ ಕೌರವರೂ, ಅವರ ಪಕ್ಷದವರೂ ನಾಶವಾದರು. ಆದರೂ ಭೂಭಾರತಗ್ಗಲಿಲ್ಲ. ಯಾಕೆಂದರೆ ಈಗ ಯಾದವರು ದರ್ಪಿಷ್ಟರಾಗಿ ದುಷ್ಟರಾಗಿದ್ದರು. ಶ್ರೀಕೃಷ್ಣನ ಬಲದಿಂದಾಗಿ ಯಾದವರು ಅಜೇಯರೆನಿಸಿದ್ದರು. ಇದರಿಂದ ಅವರು ಅಧರ್ಮಚಾರಿಗಳಾದರು. ಇದು ಅಸಹನೀಯ ಮಟ್ಟವನ್ನು ಮುಟ್ಟಿತ್ತು. ಇವರನ್ನು ನಾಶಮಾಡಿದರೆ ಮಾತ್ರ ಭೂಮಿಯ ಮೇಲೆ ಶಾಂತಿನೆಲೆಸಿತು



ಎಂದು ಭಗವಂತನಿಗೆ ಅನಿಸಿತು ಹೇಗೆ ಬಿದಿರುಗಳ ಘರ್ಷಣೆಯಿಂದ ಹುಟ್ಟಿದ ಬೆಂಕಿಯಿಂದ ಬಿದಿರು ಮಳೆಯೇ ಸುಟ್ಟು ಹೋಗುತ್ತದೋ ಹಾಗೇ ಯಾದವರು ಪರಸ್ಪರ ಕಲಹದಿಂದ ನಾಶವಾಗುವಂತೆ ಮಾಡಬೇಕೆಂದು ಸಂಕಲ್ಪಿಸಿದನು. ಹೀಗೆ ಯಾದವರ ಅಭ್ಯುದಯಕ್ಕೆ ಕಾರಣವಾಗಿದ್ದ ಶ್ರೀಕೃಷ್ಣನು ಈಗ ಮೃತ್ಯು ರೂಪನಾಗಿ ದ್ವಾರಕೆಯಲ್ಲಿದ್ದನು

ಒಮ್ಮೆ ವಿಶ್ವಾಮಿತ್ರ, ಅಸಿತ, ಕಣ್ವ, ದುರ್ವಾಸ, ಭೃಗು, ಅಂಗಿರಸ, ಕಶ್ಯಪ, ವಾಮದೇವ, ಅತ್ರಿ, ವಸಿಷ್ಠ, ನಾರದ ಮೊದಲಾದ ಮಹರ್ಷಿಗಳನ್ನು ಪ್ರಭಾಸ ಕ್ಷೇತ್ರಕ್ಕೆ ಹೋಗುವಂತೆ ಭಗವಂತನು ಪ್ರೇರಿಸಿದನು. ಅಲ್ಲಿ ಯಾದವರೆಲ್ಲ ವಿಹರಿಸುತ್ತಿದ್ದರು. ಮನಸ್ಸಿನಲ್ಲಿ ಮದತಂಬಿದ್ದ ಅವರು ವಿನಯವನ್ನು ನಟಿಸುತ್ತ ಋಷಿಗಳ ಮುಂದೆ ಹೋದರು. ಅವರು ಸಾಂಬನಿಗೆ ಗರ್ಭಿಣಿಸ್ತ್ರೀಯ ವೇಷ ತೊಡಿಸಿದ್ದರು. ಅವರು ಋಷಿಗಳನ್ನು ಕೇಳಿದರು, "ಋಷಿವರ್ಯರೇ, ಈ ಮಹಿಳೆ ಗರ್ಭಿಣಿಯಾಗಿರುವಳು. ಇವಳಿಗೆ ಗಂಡು ಮಗುವನ್ನು ಹಡೆಯುವ ಆಸೆ. ದಯೆಮಾಡಿ ಹೇಳಿ, ಇವಳು ಹೆರುವ ಮಗು ಗಂಡೋ, ಹೆಣ್ಣೋ?"

ಈ ಕುಚೇಷ್ಟೆಯಿಂದ ಋಷಿಗಳು ಮೊದಲು ದಿಗ್ಭ್ರಾಂತರಾದರು. ಬಳಿಕ ಕ್ರುದ್ಧರಾದರು. ಅವರು ಶಾಪ ಹಾಕಿದರು, "ಮೂಖರೇ, ಇವನು ಯದುಕುಲವನ್ನು ನಾಶಮಾಡುವ ಕಬ್ಬಿಣದ ಒನಕೆಯನ್ನು ಹೆರುವನು" ಇದರಿಂದ ಗಾಬರಿಯಾದ ಯಾದವರು ಸಾಂಬನ ಹೊಟ್ಟೆಗೆ ಕಟ್ಟಿದ ಬಟ್ಟೆಯನ್ನು ತೆಗೆದು ನೋಡಿದನು ಅದರೊಳಗೊಂದು ಒನಕೆಯಿತ್ತು. ಅವರು ಭಯ, ಪಶ್ಚಾತ್ತಾಪಗಳಿಂದ ಕೂಡಿದವರಾಗಿ ಉಗ್ರಸೇನನ ಮುಂದೆ ಹೋಗಿ ನಡೆದದ್ದನ್ನೆಲ್ಲ ಹೇಳಿದರು. ದ್ವಾರಕವಾಸಿಗಳೆಲ್ಲ ಹೆದರಿ ಕಂಗಾಲಾದರು. ಉಗ್ರಸೇನನು ಆ ಒನಕೆಯನ್ನು ಪುಡಿಮಾಡಿಸಿ ಸಮುದ್ರದಲ್ಲಿ ಹಾಕಿದನು. ಕೊನೆಗೆ ಪುಡಿಮಾಡಿಸಿ ಸಮುದ್ರದಲ್ಲಿ ಹಾಕಿಸಿದನು. ಕೊನೆಗೆ ಪುಡಿಯಾಗದೆ ಉಳಿದ ಅದರ ತುದಿಯನ್ನು ಸಮುದ್ರಕ್ಕೆ ಎಸೆಯಲಾಯಿತು. ಸ್ವಲ್ಪ ಸಮಯದಲ್ಲೇ ಆ ಪುಡಿಗಳೆಲ್ಲ ಅಲೆಯಲ್ಲಿ ತೇಲಿಬಂದು ಸಮುದ್ರ ದಂಡೆಯಲ್ಲಿ ಬಿದ್ದವು. ಕೆಲವು ಸಮಯ ಕಳೆದ ಮೇಲೆ ಅಲ್ಲಿ ಏರಕ ಎಂಬ ಹುಲ್ಲು ಬೆಳೆಯಿತು. ಒನಕೆಯ ತುದಿಯನ್ನು ಮೀನೊಂದು ನುಂಗಿತು. ಆ ಮೀನನ್ನು ಯಾವನೋ ಒಬ್ಬ ಬೆಸ್ತನು ಬಲೆ ಬೀಸಿ ಹಿಡಿದನು. ಆ ಮೀನನ್ನು ಜರಾ ಎಂಬ ಒಬ್ಬ ಬೇಡನು ಕೊಂಡುಕೊಂಡನು. ಅದನ್ನು ಸೀಳಿದಾಗ ಅದರ ಹೊಟ್ಟೆಯಲ್ಲಿ ಕಬ್ಬಿಣದ ತುಂಡು ಸಿಕ್ಕಿತು. ಅದನ್ನು ಚೂಪುಗೊಳಿಸಿ ತನ್ನ ಬಾಣದ ತುದಿಗೆ ಜೋಡಿಸಿದನು.

ಒಮ್ಮೆ ಬ್ರಹ್ಮಾದಿ ದೇವತೆಗಳು ದ್ವಾರಕೆಗೆ ಬಂದು ಶ್ರೀಕೃಷ್ಣನ ದರ್ಶನ ಪಡೆದರು. ಅವರೆಲ್ಲ ಪರಮಾತ್ಮನನ್ನು ನಾನಾ ವಿಧವಾಗಿ ಸುತ್ತಿಸಿದರು. ಕೊನೆಗೆ ಬ್ರಹ್ಮನು ತಮ್ಮ ಆಗಮನದ ಉದ್ದೇಶವನ್ನು ಅರುಹಿದನು,

(ಮುಂದುವರಿಯುವುದು)

# ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಶ್ರೀ ಮಾಣಿಬೆಟ್ಟು ಉಮೇಶ್‌ರಾವ್



ಮಾಣಿಬೆಟ್ಟು ಶಿರ್ವ ಶ್ರೀ ಉಮೇಶ್ ರಾಯರು ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಸಹಕಾರ ನೀಡಿದ್ದಾರೆ. ಶಿರ್ವ ಮಾಣಿಬೆಟ್ಟು ದಿ|ಶಂಕರನಾರಾಯಣ ರಾವ್ ಹಾಗೂ ದಿ| ಜಾಹ್ನವಿ(ಜಾನಕಿ)ದೇವಿ ದಂಪತಿಗಳ ನಾಲ್ವರು ಗಂಡು ಹಾಗೂ ನಾಲ್ವರು ಹೆಣ್ಣು ಮಕ್ಕಳಲ್ಲಿ ಪ್ರಥಮ ಪುತ್ರರಾದ ಶ್ರೀ ಎಸ್. ಉಮೇಶ್‌ರಾಯರು ತಮ್ಮ ಹಿರಿಯರಿಂದ ಸ್ಥಾಪಿತವಾದ ಎಸ್.ಎಮ್.ಎಸ್. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನೂ, ಮೂಡುಬೆಳ್ಳೆಯ ಚರ್ಚ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6-7ನೇತರಗತಿಯನ್ನೂ, ಶಿರ್ವದ ಸೈಂಟ್ ಮೇರೀಸ್ ಪ್ರೌಢಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನೂ ಪೂರೈಸಿದರು. ನಂತರ ಉಡುಪಿಯ ಮೂಲ ಶಿಕ್ಷಣ ತರಬೇತಿ ಸಂಸ್ಥೆ (Basic Education Training Institution)ಯಲ್ಲಿ ಶಿಕ್ಷಕ ತರಬೇತಿ ಹೊಂದಿ ತಮ್ಮದೇ ಆಡಳಿತದ ಎಸ್.ಎಮ್.ಎಸ್.ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆಗೆ ಸೇರಿದರು. ಮುಂದೆ ಮುಖ್ಯೋಪಾಧ್ಯಾಯರಾಗಿ ಬಡ್ತಿಗೊಂಡು ಸುಮಾರು 38 ವರ್ಷಗಳ ಕಾಲ ಸುದೀರ್ಘ ಅವಧಿಯ ಅಧ್ಯಾಪನ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಂಡರು. 1998ರಲ್ಲಿ ವೃತ್ತಿಯಿಂದ ನಿವೃತ್ತಿಗೊಂಡ ಶ್ರೀಯುತ ಉಮೇಶ್‌ರಾಯರು ಅಪಾರ ಶಿಷ್ಯ ವರ್ಗವನ್ನು ಹೊಂದಿದ್ದಾರೆ. ಇವರ ಇಬ್ಬರು ಸಹೋದರರು (ಚಂದ್ರಶೇಖರ ರಾವ್ ಹಾಗೂ ಜಗದೀಶ ರಾವ್) ಶಿಕ್ಷಕರಾಗಿ ನಿವೃತ್ತರಾದರೆ, ಒಬ್ಬ ಸಹೋದರ (ರಮೇಶ್ ರಾವ್) ಸಿಂಡಿಕೇಟ್ ಬ್ಯಾಂಕ್ ಅಧಿಕಾರಿಯಾಗಿದ್ದು, ನಿವೃತ್ತರಾಗಿದ್ದಾರೆ.


ಕಟಪಾಡಿ ಮಟ್ಟು ದಿ|ನಾರಾಯಣ ರಾವ್ ಹಾಗೂ ದಿ|ಶಾರದಮ್ಮ ದಂಪತಿಗಳ ಪುತ್ರಿ ಶ್ರೀಮತಿ ಲಲಿತಾರವರನ್ನು ವಿವಾಹವಾಗಿರುವ ಎಸ್.ಉಮೇಶ್ ರಾವ್ ದಂಪತಿಗಳಿಗೆ ಇಬ್ಬರು ಹೆಣ್ಣುಮಕ್ಕಳು (ಇಬ್ಬರೂ ವಿವಾಹಿತರು)ಇದ್ದಾರೆ.

ಶ್ರೀ ಎಸ್.ಉಮೇಶ್ ರಾವ್ ಶ್ರೀ ಶಾರದಾ ವೇದಿಕೆಗೆ ನೀಡಿರುವ ಈ ಕೊಡುಗೆಯನ್ನು ಕೃತಜ್ಞತೆಗಳೊಂದಿಗೆ ಸ್ವೀಕರಿಸಿ, ಅವರಿಗೆ ಹಾಗೂ ಅವರ ಮನೆಯವರಿಗೆ ಅನಂತ ಶ್ರೇಯಸ್ಸು ಉಂಟಾಗಲಿ ಎಂದು ಶ್ರೀ ಶಾರದಾ ಬಳಗವು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ| ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ| ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ| ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶ್ರೀಶಾರದಾ ನಗರ, ಕುಂಜಿಬೆಟ್ಟು, ಉಡುಪಿ - 576 102.

॥ ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ ॥

## ಆಮಂತ್ರಣ

ಮಾನ್ಯ ಸಮಾಜ ಬಾಂಧವರೇ,

ಸ್ವಸ್ತಿ! ಶ್ರೀ ವಿಜಯ ನಾಮ ಸಂವತ್ಸರದ ತುಲಾ ಮಾಸ ದಿನ ೮ ಸಲುವ ಅಶ್ವಯುಜ ಶುದ(ದಶಮಿ) ೧೦ ಯು, ತಾ.14-10-2013ನೇ ಸೋಮವಾರ

**ವಿಜಯದಶಮಿ ದಿನದಂದು**

## ಶ್ರೀ ಚಂಡಿಕಾಯಾಗ ಮತ್ತು ಶ್ರೀ ಶಾರದಾ ಪೂಜಾ

ಕಾರ್ಯಕ್ರಮವು ಶ್ರೀ ಶಾರದಾ ಮಂಟಪದಲ್ಲಿ ಜರಗಲಿದೆ. ಸರ್ವರೂ ಬಂಧು-ಬಾಂಧವರೊಡಗೂಡಿ ಆಗಮಿಸಿ, ಪೂರ್ವಾಹ್ನ ಮತ್ತು ಅಪರಾಹ್ನದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಅಪೇಕ್ಷಿಸುತ್ತೇವೆ.

**ಪ್ರಫುಲ್ಲಚಂದ್ರ ರಾವ್**
ಅಧ್ಯಕ್ಷರು

**ಯು. ಅರವಿಂದ ಕುಮಾರ್**
ಕಾರ್ಯದರ್ಶಿ

**ಹಾಗೂ ಕಾರ್ಯಕಾರಿ ಸಮಿತಿಯ ಸವಿನಯ ಆಮಂತ್ರಣ**

ವಿ.ಸೂ. : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉದಯಚಂದ್ರ ಪ್ರತಿಭಾ ಪುರಸ್ಕಾರವನ್ನು ನೀಡಲಾಗುವುದು.

**ಸಮಾಜ ಬಾಂಧವರು ಈ ಪ್ರಕಟಣೆಯನ್ನೇ ಆಮಂತ್ರಣ ಎಂದು ತಿಳಿಯಬೇಕಾಗಿ ವಿನಂತಿ.**

---

**ಶ್ರೀಶಾರದಾ ದೇವಸ್ಥಾನ,** ಶ್ರೀಶಾರದಾ ಮಂಟಪ, ಶಾರದಾ ನಗರ, ಕುಂಜಿಬೆಟ್ಟು, ಉಡುಪಿ-576 102

**ಶಾರದಾ ಶಾರದಾಂಭೋಜವದನಾ ವದನಾಂಬುಜೇ । ಸರ್ವದಾಸರ್ವದಾಽಸ್ಮಾಕಂ ಸನ್ನಿಧಿಂ ಸನ್ನಧಿಂ ಕ್ರಿಯಾತ್ ॥**

## ಶ್ರೀಶಾರದಾ ದೇವಸ್ಥಾನದಲ್ಲಿ ನವರಾತ್ರಿ ವಿಶೇಷ ಪೂಜೆಗಳು

ತಾ.05-10-2013ರಿಂದ 13-10-2013ರ ವರೆಗೆ ನವರಾತ್ರಿಯ ಪ್ರತಿದಿನ ಶ್ರೀದೇವಸ್ಥಾನದಲ್ಲಿ ಮಧ್ಯಾಹ್ನ 12-30ಕ್ಕೆ ಹಾಗೂ ರಾತ್ರಿ 8-30ಕ್ಕೆ ವಿಶೇಷ ಪೂಜೆ ನಡೆಯಲಿರುವುದು. ಭಕ್ತಾದಿಗಳು ಪ್ರತಿದಿನ ಪೂಜಾ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ವಿನಂತಿ.

- ಆಡಳಿತ ಮಂಡಳಿ

---

# ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.)

ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102

## ನವರಾತ್ರಿ ಉತ್ಸವದ ಪ್ರಯುಕ್ತ ನಡೆಯಲಿರುವ ಸ್ಪರ್ಧೆಗಳು

**ತಾ.14-10-2013ನೇ ಸೋಮವಾರ ಪೂರ್ವಾಹ್ನ ಗಂಟೆ 9.00 ರಿಂದ ನಮ್ಮ ಸಮಾಜ ಬಾಂಧವರಿಗಾಗಿ**

| ಸ್ಪರ್ಧೆಗಳು | ವಿಭಾಗಗಳು | | | ಅವಧಿ |
|---|---|---|---|---|
| | 1 | 2 | 3 | |
| **ಭಕ್ತಿಗೀತೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (ಯಾವುದೇ ರೀತಿಯ ಸಂಗೀತ ಉಪಕರಣ ಉಪಯೋಗಿಸಬಾರದು.) | 8ನೇ ತರಗತಿಯಿಂದ ಪದವಿಪೂರ್ವ ತರಗತಿ | (4 ನಿಮಿಷ) |
| **ಚಿತ್ರರಚನೆ** ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ (ಸುಂದರವಾದ ಹೂವಿನ ಚಿತ್ರ) | 5-7ನೇ ತರಗತಿಯವರೆಗೆ (ಪ್ರಾಣಿಯ ಚಿತ್ರ) | 8ನೇ ತರಗತಿಯಿಂದ ಪದವಿಪೂರ್ವ ತರಗತಿಯ ವಿದ್ಯಾರ್ಥಿಗಳು (ಪುಣ್ಯ ಕ್ಷೇತ್ರ) | (60 ನಿಮಿಷ) |
| **ರಂಗವಲ್ಲಿ** | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ (3×3 ಅಡಿ ಸ್ಥಳಾವಕಾಶದಲ್ಲಿ ಚುಕ್ಕೆ ಹಾಕಿ ರಂಗವಲ್ಲಿ) | 8ನೇ ತರಗತಿಯಿಂದ ಮೇಲ್ಪಟ್ಟ ಎಲ್ಲರಿಗೂ | (60 ನಿಮಿಷ) |
| **ಕಂಠಪಾಠ** ವಿದ್ಯಾರ್ಥಿಗಳಿಗೆ | 7ನೇ ತರಗತಿಯವರೆಗೆ (ಕಂಠಪಾಠ ಸ್ಪರ್ಧೆಯ ಶ್ಲೋಕಗಳನ್ನು ಮುಂದಿನ ಪುಟದಲ್ಲಿ ನೀಡಲಾಗಿದೆ. ಈ ಶ್ಲೋಕಗಳಲ್ಲಿ ನಿರ್ಣಾಯಕರು ಕೇಳುವ ಶ್ಲೋಕಗಳನ್ನು ಹೇಳಬೇಕು) | | 8ನೇ ತರಗತಿಯಿಂದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ | |
| **ಛದ್ಮವೇಷ** (ಏಕವ್ಯಕ್ತಿ) ವಿದ್ಯಾರ್ಥಿಗಳಿಗೆ | 4ನೇ ತರಗತಿಯವರೆಗೆ | 5-7ನೇ ತರಗತಿಯವರೆಗೆ | 8-10ನೇ ತರಗತಿಯವರೆಗೆ | (4 ನಿಮಿಷ) |
| **ಹೂ ಜೋಡಿಸುವುದು** (ಮುಕ್ತ ಅವಕಾಶ) | (ಬೆಳಿಗ್ಗೆ 10.30 ರಿಂದ ಪ್ರಾರಂಭ) ಹೂಗಳನ್ನು ಸ್ಪರ್ಧಿಗಳೇ ತರಬೇಕು. | | | (30 ನಿಮಿಷ) |
| **ಚೂರ್ಣಿಕೆ ಹೇಳುವುದು** | ಎಲ್ಲಾ ವಯಸ್ಸಿನವರಿಗೂ ಮುಕ್ತ ಅವಕಾಶ. | | ಮಧ್ಯಾಹ್ನ ಊಟ ನಡೆಯುತ್ತಿರುವಾಗ ಚೂರ್ಣಿಕೆ ಹೇಳುವುದು | |

**ವಿಶೇಷ ಸೂಚನೆಗಳು :** 1) ಆಸಕ್ತ ಸ್ಪರ್ಧಾಳುಗಳು ಅದೇ ದಿನ ಬೆಳಿಗ್ಗೆ 8.30ಕ್ಕೆ ಹಾಜರಿದ್ದು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು, ಕಡ್ಡಾಯವಾಗಿ ಬೆಳಿಗ್ಗೆ 9-30ಕ್ಕೆ ಸ್ಪರ್ಧೆಗಳು ಪ್ರಾರಂಭವಾಗಲಿವೆ 2) ರಂಗವಲ್ಲಿಗೆ ಬಣ್ಣದ ಹುಡಿ ಮತ್ತು ಚಿತ್ರ ರಚನೆಗೆ ಕಾಗದ ಹಾಳೆಗಳನ್ನು ಒದಗಿಸಲಾಗುವುದು. ಬೇಕಾದ ಇತರ ಪರಿಕರಗಳನ್ನು ಸ್ಪರ್ಧಾಳುಗಳೇ ತರಬೇಕು. 3) ಹೆಚ್ಚಿನ ನಿಯಮಗಳನ್ನು ಸ್ಪರ್ಧೆ ಆರಂಭವಾಗುವ ಮೊದಲು ಸ್ಪರ್ಧಾಳುಗಳಿಗೆ ತಿಳಿಸಲಾಗುವುದು. 4) ಕನಿಷ್ಠ 3 ಜನ ಸ್ಪರ್ಧಿಗಳು ಇಲ್ಲದಿದ್ದಲ್ಲಿ ಸ್ಪರ್ಧೆ ನಡೆಸುವ ಅಥವಾ ಬಿಡುವ ನಿರ್ಧಾರ ವ್ಯವಸ್ಥಾಪಕರದ್ದು. 5) ಫಲಿತಾಂಶ ನಿರ್ಣಯದಲ್ಲಿ ನಿರ್ಣಾಯಕರ ತೀರ್ಮಾನವೇ ಅಂತಿಮ.

***ಅದೇ ದಿನ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.), ಎಲ್ಲೂರು ಹಾಗೂ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇವರ ಸಹಯೋಗದೊಂದಿಗೆ ನುರಿತ ವೈದ್ಯರಿಂದ ಪೂರ್ವಾಹ್ನ 10 ಗಂಟೆಯಿಂದ ಮಧ್ಯಾಹ್ನದವರೆಗೆ ಉಚಿತ ವೈದ್ಯಕೀಯ ಹಾಗೂ ದಂತ ತಪಾಸಣೆ ನಡೆಸಲಾಗುವುದು. (ಮಧುಮೇಹ, ಇಸಿಜಿ, ರಕ್ತದೊತ್ತಡ, ಕೊಲೆಸ್ಟ್ರಾಲ್, ಚರ್ಮರೋಗ ತಪಾಸಣೆ ಇತ್ಯಾದಿ)***

ಸಮಾಜ ಬಾಂಧವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಸಂಜೆ ಗಂಟೆ 5-00ರಿಂದ 6-00ರ ವರೆಗೆ

**ಶ್ರೀಶಾರದಾ ಹವ್ಯಾಸಿ ಯಕ್ಷ ಕಲಾವಿದರು, ಕುಂಜಿಬೆಟ್ಟು, ಉಡುಪಿ ಇವರಿಂದ ಯಕ್ಷಗಾನ "ಭಕ್ತ ಸುಧನ್ವ" ಸಮಯ: ಸಂಜೆ 6-00ರಿಂದ 9-00**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2013-2014ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2013ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
**ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ಫೋನ್ : 0820-2520754**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ್ಥ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕ್ಥೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.2,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2013ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಉದಯಚಂದ್ರ ಪ್ರತಿಭಾ ಪುರಸ್ಕಾರ 2012-13

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2012-13ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ‍್ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2013ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿಯನ್ನು ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%★ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ‍್ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

★(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ‍್ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | | |
|---|---|---|
| ಮಂಗಳಾರತಿ | : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ | : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ | : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ | : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ | : | ಸ್ವಾಧ್ಯಾಯ ಸಮಿತಿಯವರಿಂದ ''**ಪಾರಾಯಣ**'' ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.22-09-2013) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.24-09-2013 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.11-10-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸ್ತವ್ಯದಲ್ಲಿರುವ ಯಾವುದೇ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ‍್ಯಾಂಕ್ ವಿಜೇತರಾದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ‍್ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2013ರ ಒಳಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಕರಂಗಲ್ಪಾಡಿ, ಮಂಗಳೂರು

### (ಸ್ಥಾನಿಕ ಬ್ರಾಹ್ಮಣರ ಸಂಘಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಜಾಗತಿಕ ಮಟ್ಟದ ಒಕ್ಕೂಟ)

ತಾ.7-7-2013ರಂದು ಮಂಗಳೂರಿನಲ್ಲಿ ಜರಗಿದ ಆಡಳಿತ ಮಂಡಳಿಯ ಸಭೆಯಲ್ಲಿ ನಮ್ಮ ಸಮಾಜವನ್ನು ಪ್ರತಿನಿಧಿಸುತ್ತಿರುವ ವೈದಿಕ ವೃತ್ತಿಯಲ್ಲಿರುವ ಸಮಾಜಬಾಂಧವರ ಶ್ರೇಯೋಭಿವೃದ್ಧಿಗಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವರೇ ಅದಕ್ಕೆ ಪೂರ್ವಭಾವಿಯಾಗಿ ನಮ್ಮ ಸಮಾಜದ ವೈದಿಕರೆಲ್ಲರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದಾಗಿ ನಿಶ್ಚಯಿಸಲಾಗಿದೆ. ಈ ಮಾಹಿತಿ ಸಂಗ್ರಹಣೆಯ ಜವಾಬ್ದಾರಿಯನ್ನು ಆಯಾ ಪ್ರದೇಶದ ಸದಸ್ಯ ಸಂಘಗಳಿಗೆ ಹಂಚಿಕೊಡಲಾಗಿದ್ದು ಸಂಘದ ಕಾರ್ಯಕರ್ತರು ಮಾಹಿತಿಗಾಗಿ ತಮ್ಮನ್ನು ಸಂಪರ್ಕಿಸಿದಾಗ ಅವರು ಕೇಳಿದ ಮಾಹಿತಿಯನ್ನಿತ್ತು ಸಹಕರಿಸಬೇಕೆಂದು ವೈದಿಕರೆಲ್ಲರನ್ನು ಕೋರುತ್ತಿದ್ದೇವೆ. ಹಾಗೆಯೇ ಒಂದು ವೇಳೆ ಆಗಸ್ಟ್ ಹದಿನೈದರೊಳಗೆ ಯಾರಾದರೂ ವೈದಿಕರನ್ನು ನಮ್ಮ ಕಾರ್ಯಕರ್ತರು ಸಂಪರ್ಕಿಸದೇ ಬಿಟ್ಟುಹೋಗಿದ್ದ ಪಕ್ಷದಲ್ಲಿ ಅವರೇ ಸ್ವತಃ ತಮ್ಮ ಪ್ರದೇಶದ ಸಂಘದ ಅಧ್ಯಕ್ಷರು ಅಥವಾ ಈ ಕಾರ್ಯಕ್ರಮದ ಉಸ್ತುವಾರಿ ಹೊಣೆಹೊತ್ತಿರುವ ಶ್ರೀಪ್ರಫುಲ್ಲಚಂದ್ರರಾವ್, ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ, ಫೋನ್ ಸಂಖ್ಯೆ 0820-2520754ನಲ್ಲಿ ಸಂಪರ್ಕಿಸಿ ಇವರಿಗೇ ನೇರವಾಗಿ ತಲುಪಿಸಬಹುದು.

**-ಶ್ರೀಎನ್.ಕೆ.ಜಗನ್ನಿವಾಸರಾವ್, ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

2013-14 ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಮ್.ಇ., ಎಮ್.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಮ್.ಎ., ಎಮ್.ಎಸ್‌ಸಿ., ಎಮ್.ಕಾಂ, ಸಿ.ಎ., ಬಿ.ಎಡ್., ಡಿ.ಎಡ್.,) ಪಡೆಯಲು ಸಾಲ ವಿದ್ಯಾರ್ಥಿ ವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ ìಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರುî ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2013-14ನೇ ಸಾಲಿನ ಸಾಲದ ಕಂತನ್ನು ಪಡೆಯಲು ìಶ್ರೀ ಸುಬಹ್ಮಣ್ಯ ಸಹಕಾರ ಸಂಘ, ಮಂಗಳೂರುî ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**2013-14ನೇ ಸಾಲಿನಲ್ಲಿ ಪಿ ಯು ಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುತ್ತಿರುವ ಸಮಾಜದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿ ವೇತನ ಪಡೆಯಲು ದಿನಾಂಕ 30-10-2013ರ ಒಳಗೆ ತಲುಪುವಂತೆ ಅರ್ಜಿಗಳನ್ನು ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿ ಹಾಗೂ ಈ ವರ್ಷದ ಕಲಿಕಾಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.**

**ಅರ್ಜಿ ಫಾರಂಗಳು ಉಡುಪಿ ಹಾಗೂ ದ ಕ ಜಿಲ್ಲಾ ನಮ್ಮ ಸಮಾಜದ ಸಂಘ ಸಂಸ್ಥೆಗಳಲ್ಲಿ ಲಭ್ಯವಿದೆ.**

ಕಾರ್ಯದರ್ಶಿ

## ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್ (ರಿ.)

76 ಬಡಗಬೆಟ್ಟು, ಕುಕ್ಕಿಕಟ್ಟೆ, ಉಡುಪಿ-576101

**ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ**

2013-14ನೇ ಸಾಲಿನ ದಿ| ಡಾ.ವೈ.ಚಂದ್ರಶೇಖರರಾವ್ ಸ್ಮಾರಕ ವಿದ್ಯಾರ್ಥಿವೇತನಕ್ಕಾಗಿ ಪ್ರತಿಭಾನ್ವಿತ ಹಾಗೂ ಆರ್ಥಿಕ ಸಹಾಯ ಅಗತ್ಯವಿರುವ ತಾಂತ್ರಿಕ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ತಮ್ಮ ವಿವರಗಳೊಂದಿಗೆ ಆದಾಯ ಹಾಗೂ ವ್ಯಾಸಂಗ ದೃಢಪತ್ರಿಕೆಗಳನ್ನು ಲಗತ್ತಿಸಿರಬೇಕು. ತಂದೆ-ತಾಯಿಯರ ವೃತ್ತಿ, ವಿಳಾಸ, ದೂರವಾಣಿ ಸಂಖ್ಯೆ ಹಾಗೂ ನಿಮ್ಮ ಬ್ಯಾಂಕ್ ಖಾತೆಯ ವಿವರಗಳನ್ನು (ಪಾಸ್ ಬುಕ್ಕಿನ ಮೊದಲ ಹಾಳೆಯ ಪ್ರತಿ) ಅರ್ಜಿಯಲ್ಲಿ ನಮೂದಿಸಿರಬೇಕು. ಕ್ರಮಬದ್ಧವಾಗಿ ಬರೆದ ಅರ್ಜಿಗಳನ್ನು ಮಾತ್ರ ಗಮನಿಸಲಾಗುವುದು. ಅರ್ಜಿ ಕಳುಹಿಸಲು ಕೊನೆಯ ದಿನಾಂಕ 31-10-2013. ಅರ್ಜಿಯನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ.

**ಡಾ| ವೈ.ಸುದರ್ಶನರಾವ್**

**ಕೆನರಾಹೆಲ್ತ್‌ಸೆಂಟರ್ ,ಅಂಜುಮಾನ್ ರಸ್ತೆ, ಸಿಟಿಬಸ್ಟ್ಯಾಂಡ್ ಬಳಿ, ಉಡುಪಿ-576101**

## ವೈದಿಕ ಶಿಬಿರ

**ತಾ.16-10-2013ರಿಂದ 23-10-2013ರ ವರೆಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಮಕ್ಕಳ ವೈದಿಕ ಶಿಬಿರವು ನೆರವೇರಲಿದೆ. ಶಿಬಿರದಲ್ಲಿ ಉಪನ್ಯಾಸದ ನಿಮಿತ್ತ ವೈದಿಕ ಅರ್ಚಕರು ಭಾಗವಹಿಸಲಿದ್ದಾರೆ. ಹಾಗೆಯೇ ಪ್ರತಿ ದಿನ ಬೆಳಿಗ್ಗೆ 5-30ಯಿಂದ 7-00 ಗಂಟೆಯ ವರೆಗೆ ಉಚಿತ ಪ್ರಾಣಯೋಗ ಶಿಬಿರವು ನಡೆಯಲಿದೆ. ಶಿಬಿರಾರ್ಥಿಗಳು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.**

**ಸೂಚನೆ:**
1. ಶಿಬಿರಾರ್ಥಿಗಳಿಗೆ ಊಟೋಪಚಾರ, ಉಳಿದುಕೊಳ್ಳಲು ವ್ಯವಸ್ಥೆ ಇದೆ.
2. ಶಿಬಿರಾರ್ಥಿಗಳು ಕೌಳಿಗೆ ಸೌಟು, ಹರಿವಾಣ ಮತ್ತು ದಿನನಿತ್ಯದ ವಸ್ತುಗಳನ್ನು ತರತಕ್ಕದ್ದು.
3. ಜಪ ಮತ್ತು ಪೂಜಾ ವಿಧಾನ ಕಲಿಯಬಯಸುವ ದೊಡ್ಡವರಿಗೂ ಅವಕಾಶವಿದೆ.
4. ಯೋಗ ಶಿಬಿರಕ್ಕೆ ಪುರುಷರು ಹಾಗೂ ಮಹಿಳೆಯರಿಗೂ ಅವಕಾಶವಿದೆ.

**ಮಾಹಿತಿಗಾಗಿ ಸಂಪರ್ಕ :**

**ಕೃಷ್ಣರಾಜ ಭಟ್ (9980195355), ಸುಧಾಕರ ಬೆಳ್ಳೆ (9845193103)**

**ಕಾರ್ಯಕ್ರಮದ ಪ್ರಾಯೋಜಕರು : ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಮಹಿಳಾವೇದಿಕೆ, ಪಡುಬಿದ್ರಿ ಮತ್ತು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿ, ಪಾದೆಬೆಟ್ಟು**

## ದಿ| ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ ಪ್ರತಿಭಾ ಪುರಸ್ಕಾರ

2012–13ನೇ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ದ್ವಿತೀಯ ಪಿ ಯು ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕ ಗಳಿಸಿದ ದ ಕ ಮತ್ತು ಉಡುಪಿ ಜಿಲ್ಲೆಗಳ ಸರ್ವ ವಿದ್ಯಾರ್ಥಿಗಳನ್ನು ಮೇಲಿನ ಪ್ರತಿಷ್ಠಾನದ ವತಿಯಿಂದ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭೆಯಲ್ಲಿ ನಡೆಯುವ ನಾಡಹಬ್ಬದಂದು ಪುರಸ್ಕರಿಸಲಾಗುವುದು. ವಿದ್ಯಾರ್ಥಿಗಳು ಅಂಕ ಪಟ್ಟಿಯ ನಕಲು, ವಿಳಾಸ , ದೂರವಾಣಿ ಸಂಖ್ಯೆ ಮೊದಲಾದ ವಿವರವನ್ನು 30–09–2013ರ ಒಳಗಾಗಿ ಮೇಲಿನ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ. ನಾಡಹಬ್ಬದ ದಿನಾಂಕವನ್ನು ಮುಂದೆ ತಿಳಿಸಲಾಗುವುದು. –ಕೆ.ಸದಾಶಿವ ಶಾಸ್ತ್ರಿ, ಕುಳಾಯಿ.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಋಗುಪಾಕರ್ಮ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ತಾ.20–08–2013ರಂದು ಬೆಳಿಗ್ಗೆ 6 ಗಂಟೆಗೆ ಋಗುಪಾಕರ್ಮ ನೆರವೇರಿತು. ಪಾವಂಜೆ ಶ್ರೀ ವಾಸುದೇವ ಉಪಾಧ್ಯಾಯರು ಹೋಮ-ಹವನಗಳನ್ನು ನೆರವೇರಿಸಿದರು. ಶ್ರೀ ಸಭಾದ ಪದಾಧಿಕಾರಿಗಳಾದ ಶ್ರೀ ಕರುಣ್ ರಾವ್ ಬೆಳ್ಳೆ , ಡಾ. ಎ. ಪಿ. ಕೃಷ್ಣ, ಶ್ರೀ ಅನಿಲ್ ರಾವ್ ಬಿ. ಎಸ್., ಶ್ರೀ ಪಿ. ಶ್ರೀಕಾಂತ್ ರಾವ್ ಸಹಿತ ನೂರಾರು ಸಮಾಜ ಬಾಂಧವರು ಭಾಗವಹಿಸಿದ್ದರು.

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, (ರಿ.), ಉಡುಪಿ

ಶಾರದಾನಗರ, ಕುಂಜಿಬೆಟ್ಟು, ಉಡುಪಿ

**2012-13ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು**

ಪ್ರಿಯರೇ, 01-09-2013

ಸಂಘದ ವಾರ್ಷಿಕ ಮಹಾಸಭೆಯು ತಾ.29-09-2013ನೇ ರವಿವಾರ ಅಪರಾಹ್ನ 4-00 ಗಂಟೆಗೆ ಕುಂಜಿಬೆಟ್ಟು ಶ್ರೀ ಶಾರದಾ ಮಂಟಪದ ಸಭಾಭವನದಲ್ಲಿ ನಡೆಯಲಿದೆ. ಸಂಘದ ಸದಸ್ಯರೆಲ್ಲರೂ ಈ ಮಹಾಸಭೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

**ವಿಷಯ ಸೂಚಿ**

1. ಪ್ರಾರ್ಥನೆ
2. ಸ್ವಾಗತ
3. 2012-2013ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸಿನ ಅಂಗೀಕಾರ
4. 2011-2012ನೇ ಸಾಲಿನ ವಾರ್ಷಿಕ ಮಹಾಸಭೆಯ ವರದಿ ಅಂಗೀಕಾರ
5. 2012-2013ನೇ ವರ್ಷದ ಕಾರ್ಯಕ್ರಮಗಳ ವರದಿಯ ಅಂಗೀಕಾರ
6. 2012-2013ನೇ ವರ್ಷದ ಆಯ-ವ್ಯಯ ಮತ್ತು ಆಸ್ತಿ-ಜವಾಬ್ದಾರಿ ತಖ್ತೆಗಳ ಪರಿಶೋಧಿತ ವರದಿಯ ಮಂಡನೆ ಮತ್ತು ಅಂಗೀಕಾರ
7. 2013-2014ನೇ ವರ್ಷಕ್ಕೆ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
8. 2013-2014ನೇ ವರ್ಷಕ್ಕೆ ಲೆಕ್ಕ ಪರಿಶೋಧಕರ ನೇಮಕ
9. ಅಧ್ಯಕ್ಷರ ಅನುಮತಿಯ ಮೇರೆಗೆ ಬರತಕ್ಕ ಇತರ ವಿಷಯಗಳು
10. ಧನ್ಯವಾದ ಸಮರ್ಪಣೆ

ಸಹಿ/-

**ಕಾರ್ಯದರ್ಶಿ**

ವಿ.ಸೂ. : ಚರ್ಚೆಯ ವಿಷಯ ಇದ್ದಲ್ಲಿ ಅದನ್ನು ತಾ.24-09-2013ರ ಸಂಜೆ 5-00 ಗಂಟೆಗೆ (ಕಛೇರಿಯ ಕೆಲಸದ ಸಮಯದಲ್ಲಿ) ಮುಂಚಿತವಾಗಿ ಕಾರ್ಯದರ್ಶಿಯವರಿಗೆ ಪತ್ರ ಮೂಲಕ ತಲಪಿಸಬೇಕು.

## ಶ್ರೀ ಶಾರದಾ ಕ್ರೆಡಿಟ್ ಕೋ-ಆಪರೇಟಿವ್ ಸೊಸ್ಯಾಟಿ (ನಿ.)

**ಎಲ್.ನಂ.31017, ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101. ಫೋನ್ : 2522408**

**2011-12ನೇ ಸಾಲಿನ ವಾರ್ಷಿಕ ಮಹಾಸಭೆಯ ನೋಟೀಸು**

ಮಾನ್ಯ ಸದಸ್ಯರೇ, ತಾ.22-07-2013

ನಮ್ಮ ಸೊಸ್ಯಾಟಿಯ 2012-13ನೇ ಸಾಲಿನ ವಾರ್ಷಿಕ ಮಹಾಸಭೆಯು ತಾ.22-09-2013ನೇ ರವಿವಾರ ಬೆಳಿಗ್ಗೆ 10-30 ಗಂಟೆಗೆ ನಮ್ಮ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.

ಆಡಳಿತ ಮಂಡಳಿಯ ನಿರ್ಣಯದಂತೆ

| | |
|---|---|
| ಪಟ್ಟಾಭಿರಾಮ ಎನ್.ಎಸ್. | ಎಂ. ಸದಾನಂದ ರಾವ್ |
| ಕಾರ್ಯದರ್ಶಿ | ಅಧ್ಯಕ್ಷರು |

**ವಿಷಯ ಸೂಚಿ**

1. ಮಹಾಸಭೆಯ ನೋಟೀಸನ್ನು ಓದಿ ಅಂಗೀಕರಿಸುವುದು
2. ತಾ.23-09-2012ರಂದು ಜರಗಿದ ಮಹಾಸಭೆಯ ವರದಿಯ ಅಂಗೀಕಾರ
3. 2012-2013ನೇ ಸಾಲಿನ ವಾರ್ಷಿಕ ವರದಿಯ ಅಂಗೀಕಾರ.
4. 2012-2013ನೇ ವರ್ಷದ ಅಪರಿಶೋಧಿತ ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ-ಜವಾಬ್ದಾರಿಗಳ ತಃಖ್ತೆಯ ಪರಿಶೀಲನೆ ಮತ್ತು ಅಂಗೀಕಾರ.
5. 2012-2013ನೇ ಸಾಲಿನ ಅಂದಾಜು ಆಯವ್ಯಯ ತಃಖ್ತೆಗಿಂತ ಹೆಚ್ಚಾದ ವೆಚ್ಚಗಳ ಪರಿಶೀಲನೆ ಮತ್ತು ಮಂಜೂರಾತಿ.
6. 2013-2014ನೇ ಸಾಲಿನ ಅಂದಾಜು ಆಯವ್ಯಯ ಪಟ್ಟಿಯ ಅಂಗೀಕಾರ
7. ಸಮಗ್ರ ಮೂಲ ಅಪನಿಬಂಧನೆಗಳ ತಿದ್ದುಪಡಿ ಬಗ್ಗೆ ತಿದ್ದುಪಡಿಯನ್ನು ಸೊಸೈಟಿಯ ಕಛೇರಿಯಲ್ಲಿ ಬಂದು ಪರಿಶೀಲಿಸಬಹುದು.
8. ಅಧ್ಯಕ್ಷರ ಅನುಮತಿ ಮೇರೆಗೆ ಮಹಾಸಭೆಯ ವ್ಯಾಪ್ತಿಗೆ ಒಳಪಟ್ಟು ಬರಬಹುದಾದ ಇತರ ವಿಷಯಗಳು. ಚರ್ಚೆಯ ವಿಷಯಗಳಿದ್ದರೆ ಸದಸ್ಯರು ಮಹಾಸಭೆಯ ದಿನಾಂಕದ ಐದು ದಿನಗಳ ಮೊದಲು ತಲುಪುವಂತೆ ಬರಹ ಮೂಲಕ ಸೊಸ್ಯಾಟಿಯ ಅಧ್ಯಕ್ಷರಿಗೆ ಅಥವಾ ಕಾರ್ಯದರ್ಶಿಯವರಿಗೆ ಸೊಸೈಟಿಯ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.

**ಲಾಭಾಂಶ : 2006-2007ರಿಂದ 2011-2012ನೇ ವರ್ಷದ ವರೆಗಿನ ಲಾಭಾಂಶವನ್ನು ಪಡೆದುಕೊಳ್ಳದೇ ಇರುವ ಸದಸ್ಯರು ಸೊಸೈಟಿಯ ವ್ಯವಹಾರದ ವೇಳೆಯಲ್ಲಿ ಬಂದು ಪಡೆದುಕೊಳ್ಳಬಹುದು. 2006-07ನೇ ಸಾಲಿನ ಲಾಭಾಂಶ ಪಡೆದುಕೊಳ್ಳದೇ ಇದ್ದವರು ಅದನ್ನು ಪಡೆದುಕೊಳ್ಳಲು ಕೊನೆಯ ದಿನಾಂಕ 31-10-2013.**





RAJESH POWER PRESS


PRINTERS & PUBLISHERS

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

QUALITY FIRST AND ALWAYS


*Krishna Rao*

Ph : 2520652
Mob. : 9902029048



KISHAN


Studio & Video



Indoor Photography & Port Folio Photography, Video & Mixing, Lamination

MAIN ROAD, MAJOOR & BANTAKAL.

# ಕನ್ನಡ ಕವಿಕಾವ್ಯ ಪರಿಚಯ-೯ : ಕವಿ ಚಕ್ರವರ್ತಿ ರನ್ನ



- ಹರಿದಾಸ ಮ.ನಾ.ಹೆಬ್ಬಾರ
ಎಂ.ಎ., ಬಿ.ಎಡ್.

ರನ್ನನು ಕನ್ನಡದ ಹೆಮ್ಮೆಯ ಕವಿಯಾಗಿರುವನು. ಈತನು ಕನ್ನಡದ ಪ್ರಖ್ಯಾತ 'ಕವಿರತ್ನತ್ರಯ'ರಲ್ಲಿ ಒಬ್ಬನು ಪಂಪ ಮತ್ತು ಪೊನ್ನ-ಇವರಿಬ್ಬರು ಇತರರು. ಕನ್ನಡ ಕವಿಗಳ ಇತಿಹಾಸದಲ್ಲಿ ಈ ರತ್ನತ್ರಯರಲ್ಲಿ ಸಮಾನತೆ ಇದೆ. ಮೂವರೂ ಸಾಮಾನ್ಯವಾಗಿ ಸಮಕಾಲೀನರು; ಮೂವರೂ ಜೈನಕವಿಗಳು; ಮೂವರು ಒಂದೊಂದು ಧಾರ್ಮಿಕ ಮತ್ತು ಒಂದೊಂದು ಲೌಕಿಕ ಗ್ರಂಥಗಳನ್ನು ಬರೆದಿರುವವರು. ಸದ್ಯ ರನ್ನನ ಕುರಿತಾಗಿ ತಿಳಿದುಕೊಳ್ಳೋಣ. ಬಿಜಾಪುರ ಜಿಲ್ಲೆಯ ಮುದುವೊಳಲು (ಈಗಿನ ಮುದೋಳ) ಎಂಬುದು ಈತನ ಹುಟ್ಟೂರು ಜೈನ ಮತದ ಬಳೆಗಾರ ವೃತ್ತಿಯ ಜಿನವಲ್ಲಭ ಎಂಬುವನು ಇವನ ತಂದೆ; ಅಬ್ಬಲಬ್ಬೆ ಎಂಬವಳು ಈತನ ತಾಯಿ. ಕ್ರಿಸ್ತಶಕ 949ರಲ್ಲಿ ರನ್ನನು ಜನ್ಮ ತಾಳಿದನು. ಇವನ ಅಣ್ಣಂದಿರು ಮತ್ತು ತಂದೆ ಇವರೆಲ್ಲರೂ ಬಳೆಯ ಗಂಟನ್ನು ಮನೆಮನೆಗೆ ಹೊತ್ತು ಬಳೆ ಮಾರಿ ಜೀವನ ಸಾಗಿಸುತ್ತಿದ್ದರು. ಆದರೆ ರನ್ನನಿಗೆ ತನ್ನ ಬಾಲ್ಯದಿಂದಲೂ ಮನೆಯವರು ಮಾಡುತ್ತಿದ್ದ ವೃತ್ತಿಯಲ್ಲಿ ಆಸಕ್ತಿಯಿರಲಿಲ್ಲ. ಎಲ್ಲೋ ಒಂದೆರಡು ಕಡೆಗಳಲ್ಲಿ ಪುರಾಣ ಪ್ರವಚನಗಳನ್ನು ಕೇಳಿದ್ದ ರನ್ನನಿಗೆ ತಾನೂ ಕಾವ್ಯಗಳನ್ನು ಬರೆಯಬೇಕೆಂದೂ ಆಸೆಯಿತ್ತು. ಇದನ್ನವನು ತನ್ನ ಅಕ್ಕಪಕ್ಕದವರಲ್ಲಿ ಹೇಳಿಕೊಳ್ಳುತ್ತಿದ್ದನು. ಅದನ್ನು ಕೇಳಿದವರೆಲ್ಲರೂ ರನ್ನನನ್ನು 'ಕವಿಚಕ್ರವರ್ತಿ' 'ಮಹಾಕವಿ' ಯೆಂದು ಅಣಿಕಿಸಿ ಹಾಸ್ಯ ಮಾಡುತ್ತಿದ್ದರು. ಮನೆಯವರೂ ಕೂಡಾ ಇವನಿಗೆ ಪ್ರೋತ್ಸಾಹ ಕೊಡುತ್ತಿರಲಿಲ್ಲ. ಮುಂದೊಂದು ದಿನ ತನ್ನ ಆಸೆಯನ್ನು ಹತ್ತಿಕ್ಕಿಕೊಳ್ಳಲಾಗದೆ ವಿದ್ಯಾಭ್ಯಾಸ ಪಡೆಯುವ ಕಾರಣದಿಂದ ಹುಟ್ಟಿದೂರನ್ನು ತ್ಯಜಿಸಿ, ಆ ಕಾಲದಲ್ಲಿ 'ಪಂಡಿತಪುರಿ' ಎಂದು ಪ್ರಸಿದ್ಧವಾಗಿದ್ದ ಬಂಕಾಪುರಕ್ಕೆ ಬಂದನು. ಜಿನಮಂದಿರವೊಂದರಲ್ಲಿ, ಆ ಪರಿಸರ ದಲ್ಲಿಯೇ ಪ್ರಖ್ಯಾತ ಪಂಡಿತರೆನಿಸಿದ್ದ ಶ್ರೇಷ್ಠ ಗುರು ಅಜಿತಸೇನಾಚಾರ್ಯರು ನಡೆಯಿಸುತ್ತಿದ್ದ ಪ್ರವಚನ ತರಗತಿಯಲ್ಲಿ ದೂರದಲ್ಲಿ ಮೌನವಾಗಿ ಕುಳಿತು ಅತ್ಯಂತ ಆಸಕ್ತಿಯಿಂದ ಪಾಠವನ್ನು ಕೇಳುತ್ತಿದ್ದನು. ಪಾಠ ಮುಗಿದ ಬಳಿಕ, ಗುರುಗಳು, ತದೇಕಚಿತ್ತನಾಗಿ ತನ್ನ ಪ್ರವಚನವನ್ನು ಕೇಳುತ್ತಿದ್ದ ಈತನನ್ನು ಕರೆದು ಅವನ ಪೂರ್ವಾಪರವನ್ನು ವಿಚಾರಿಸಿದರು. ಹದಿನೆಂಟರ ಹರೆಯವನ್ನು ಮೀರುತ್ತಿದ್ದ ರನ್ನನಲ್ಲಿ ವಿದ್ಯಾಭ್ಯಾಸ ಮಾಡಬೇಕೆಂಬ ಅದಮ್ಯ ಉತ್ಸಾಹವಿದ್ದುದನ್ನು ತಿಳಿದ ಗುರುಗಳು, ಅವನ ವ್ಯಕ್ತಿತ್ವ, ಮುಖಲಕ್ಷಣ, ಕುಂದಿಲ್ಲದ ಜ್ಞಾನದಾಹ, ಆತ್ಮವಿಶ್ವಾಸ ಪೂರಿತವಾದ ಮಾತು-ಇವುಗಳನ್ನು ಗಮನಿಸಿ ರನ್ನನನ್ನು ತನ್ನ ಶಿಷ್ಯನನ್ನಾಗಿ ಸ್ವೀಕರಿಸಿದರು. ಅತ್ಯಂತ ಚಾಣಾಕ್ಷತೆಯಿಂದ ಅಕ್ಷರಾಭ್ಯಾಸದಿಂದ ತೊಡಗಿ ವ್ಯಾಕರಣ, ಛಂದಸ್ಸು, ಅಲಂಕಾರ ಇತ್ಯಾದಿಗಳ ಸಮೇತ ಕನ್ನಡ ಮತ್ತು ಸಂಸ್ಕೃತ ಉಭಯ ಭಾಷೆಗಳಲ್ಲಿ ಪಾಂಡಿತ್ಯವನ್ನು, ಪರಿಣತಿಯನ್ನು ಗಳಿಸಿದನು.

ಪ್ರಸಿದ್ಧ ಜೈನಕ್ಷೇತ್ರವಾಗಿದ್ದ ಶ್ರವಣಬೆಳಗೊಳ ಪರಿಸರದಲ್ಲಿ ಚಾವುಂಡರಾಯನು ಶ್ರವಣಬೆಳಗೋಳದ ಚಂದ್ರಗಿರಿ ಬೆಟ್ಟದ ಮೇಲೆ 53 ಅಡಿ ಎತ್ತರದ ಬಾಹುಬಲಿ (ಗೊಮ್ಮಟ) ಮೂರ್ತಿಯನ್ನು ಸ್ಥಾಪಿಸಿದವನು, ಸಾಹಿತ್ಯ-ಕಲೆಗಳ ಪೋಷಕನೂ ಆಗಿದ್ದನು. ರನ್ನನು ಚಾವುಂಡರಾಯನ ಆಶ್ರಯವನ್ನು ಪಡೆದು ಕೃತಿ ರಚನೆಯನ್ನು ಆರಂಭಿಸಿದನು. ಗಂಗ ವಂಶದ ರಾಜ ಮನೆತನದ ಪತನದ ನಂತರ ಕವಿ ರನ್ನನು ಚಾಲುಕ್ಯ ದೊರೆ ತೈಲಪ ಮತ್ತು ಅವನ ಮಗ ಇರಿವಬೆಡಂಗ ಸತ್ಯಾಶ್ರಯನ ಆಸ್ಥಾನದಲ್ಲಿ ವಿದ್ವಾಂಸನೂ, ಕವಿಯೂ ಆದನು. ಜಕ್ಕಿ ಮತ್ತು ಶಾಂತಿ ಎಂಬ ಇಬ್ಬರು ಹೆಂಡಿರು ರನ್ನನಿಗಿದ್ದರು. ರಾಯನೆಂಬ ಮಗನೂ, ಅತ್ತಿಮಬ್ಬೆ ಎಂಬ ಮಗಳೂ ಇದ್ದರು. ಜೈನ ತೀರ್ಥಂಕರರಲ್ಲಿ ಒಬ್ಬನಾಗಿದ್ದ ಅಜಿತನಾಥನ ಜೀವನ ಚರಿತ್ರೆಯನ್ನು 'ಅಜಿತ ಪುರಾಣ' ಎಂಬ ಹೆಸರಿನಲ್ಲಿ ಈತನು ಧಾರ್ಮಿಕ ಗ್ರಂಥವಾಗಿ ಬರೆದಿರುವನು. ಮಹಾಭಾರತದ ಗದಾಪರ್ವ ಮತ್ತು ಸೌಪ್ತಿಕ ಪರ್ವಗಳ ಕಥೆಗಳನ್ನು ಸೇರಿಸಿ ಸಿಂಹಾವಲೋಕನ ಕ್ರಮದಿಂದ 'ಸಾಹಸಭೀಮ ವಿಜಯ' ಅಥವಾ 'ಗದಾಯುದ್ಧ' ವೆಂಬ ಲೌಕಿಕ ಕಾವ್ಯವನ್ನು ಬರೆದಿರುವನು. ಚಕ್ರೇಶ್ವರ ಚರಿತೆ' 'ಪರಶುರಾಮ ಚರಿತೆ' ಎಂಬ ಗ್ರಂಥಗಳನ್ನು 'ರನ್ನಕಂದ ಎಂಬ ನಿಘಂಟನ್ನೂ ಬರೆದಿರುವನು.

(ಮುಂದುವರಿಯುವುದು...)

## ಶ್ರೀಸರಸ್ವತೀಸ್ತುತಿಃ

**(7ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಕಂಠಪಾಠಕ್ಕಾಗಿ)**

**ನಮಸ್ತೇ ಶಾರದಾದೇವಿ ಕಾಶ್ಮೀರಪುರವಾಸಿನಿ।**
**ತ್ವಾಮಹಂ ಪ್ರಾರ್ಥಯೇನಿತ್ಯಂ ವಿದ್ಯಾಂಬುದ್ಧಿಂಚ ದೇಹಿಮೇ ॥೧॥**

**ಯಾ ಶ್ರದ್ಧಾ ಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ।**
**ಭಕ್ತಜಿಹ್ವಾಗ್ರಸದನಾ ಶಮಾದಿಗುಣದಾಯಿನೀ ॥೨॥**

**ನಮಾಮಿ ಯಾಮಿನೀನಾಥಲೇಖಾಲಂಕೃತ ಕುಂತಲಾಮ್।**
**ಭವಾನೀಂ ಭವಸಂತಾಪ ನಿರ್ವಾಪಣ ಸುಧಾನದೀಮ್ ॥೩॥**

**ಭದ್ರಕಾಲ್ಯೈ ನಮೋ ನಿತ್ಯಂ ಸರಸ್ವತ್ಯೈ ನಮೋ ನಮಃ।**
**ವೇದವೇದಾಂಗವೇದಾಂತ ವಿದ್ಯಾಸ್ಥಾನೇಭ್ಯ ಏವ ಚ ॥೪॥**

**ಬ್ರಹ್ಮ ಸ್ವರೂಪಾ ಪರಮಾ ಜ್ಯೋತೀರೂಪಾ ಸನಾತನೀ।**
**ಸರ್ವವಿದ್ಯಾಧಿದೇವೀ ಯಾ ತಸ್ಯೈ ವಾಣ್ಯೈ ನಮೋನಮಃ ॥೫॥**

**ಯಯಾ ವಿನಾ ಜಗತ್ಸರ್ವಂ ಶಶ್ವಜ್ಜೀವಮೃತಂ ಭವೇತ್ ।**
**ಜ್ಞಾನಾಧೀದೇವೀ ಯಾ ತಸ್ಯೈ ಸರಸ್ವತ್ಯೈ ನಮೋನಮಃ॥೬॥**

**ಯಯಾ ವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ ಸದಾ ।**
**ಯಾ ದೇವೀ ವಾಗಧಿಷ್ಠಾತ್ರೀ ತಸ್ಯೈ ವಾಣ್ಯೈ ನಮೋನಮಃ॥೭॥**

## ಶ್ರೀಶಾರದಾಪಂಚರತ್ನಸ್ತುತಿಃ

**(೮ನೇ ತರಗತಿ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಕಂಠಪಾಠಕ್ಕಾಗಿ)**

**ಶ್ರೀಮಚ್ಛಂಕರದೇಶಿಕೇಂದ್ರರಚಿತೇ**
**ತುಂಗಾಪಗಾತೀರಗೇ**
**ಶೃಂಗೇರ್ಯಾಖ್ಯ ಪುರಸ್ಥಿತೇ ಸುವಿಮಲೇ**
**ಸನ್ಮೌನಿಸಂಸೇವಿತೇ।**
**ಪೀಠೇ ತಾಂ ರವಿಕೋಟಿದೀಪ್ತಿ ಸಹಿತಾಂ**
**ರಾರಾಜಮಾನಾಂ ಶಿವಾಂ**
**ರಾಜೀವಾಕ್ಷ ಮುಖಾಮರಾರ್ಚಿತಪದಾಂ**
**ವಂದೇ ಸದಾ ಶಾರದಾಮ್॥೧॥**

**ಪಾದಾನಮ್ರಜನಾರ್ತಿನಾಶನಿಪುಣಾಂ**
**ನಾದಾನುಸಂಧಾಯಿನೀಂ**
**ವೇದಾಂತಪ್ರತಿಪಾದ್ಯ ಮಾನವಿಭವಾಂ**
**ವಾದಾದಿಶಕ್ತಿ ಪ್ರದಾಮ್।**
**ವಿದ್ಯಾಕಲ್ಪಲತಾಂ ಚತುರ್ಮುಖಮುಖಾಂಭೋಜಾತ**
**ಸೂರ್ಯಾಯಿತಾಂ**
**ವಿದ್ಯಾ ತೀರ್ಥಗುರೂತ್ತ ಮೈರಹರಹಃ**
**ಸಂಸೇವ್ಯಮಾನಾಂ ಭಜೇ॥೨॥**

**ಈಷತ್ಸ್ಮೇರಮುಖಾಂಬುಜಾಂ ಕುಚಭರಾನಮ್ರಾಂ**
**ತ್ರಿಲೋಕಾವನೀಂ**
**ದೈತ್ಯವ್ರಾತವಿನಾಶಿನೀಂ ಕಚಜಿತ**
**ಪ್ರಾವೃಟ್ಪಯೋದಾಂ ಶಿವಾಮ್।**
**ಸಂಸಾರಾರ್ಣವಮಗ್ನದೀನಜನತಾ**
**ಸಂತಾಪಸನ್ನಾಶಿನೀಂ**
**ವಂದೇ ತಾಂ ಶುಭದಾಮನನ್ಯ ಶರಣಃ**
**ಸ್ವಾಂತೇ ಸದಾ ಶಾರದಾಮ್ ॥೩॥**

**ಕಾರುಣ್ಯಾಮೃತವಾರಿರಾಶಿಮನಿಶಂ**
**ಕೇಯೂರಹಾರೈರ್ವೃತಾಂ**
**ಕಾಮಾರೇಸ್ಸಹಜಾಂ ಕರಾಬ್ಜವಿಲಸತ್ಕೀರಾಂ**
**ಕುಬೇರಾರ್ಚಿತಾಮ್।**
**ಕಾಮಕ್ರೋಧಮಯಖಾರಿವರ್ಗಶಮನೀಂ**
**ಕೈವಲ್ಯ ಸಂಪತ್ಪ್ರದಾಂ**
**ಕಂಜೋದ್ಭೂತಮನಃಪ್ರಿಯಾಂ ಹೃದಿ ಭಜೇ**
**ಭಕ್ತ್ಯಾ ಸದಾ ಶಾರದಾಮ್ ।೪॥**

**ನಿತ್ಯಾನಿತ್ಯ ವಿವೇಕದಾನನಿಪುಣಾಂ**
**ಸ್ತುತ್ಯಾಂ ಮುಕುಂದಾದಿಭಿಃ**
**ಯತ್ಯಾಕಾರಶಶಾಂಕಮೌಲಿವಿನುತಾಂ**
**ಸತ್ಯಾಪಿತಸ್ವಾಶ್ರವಾಮ್।**
**ನತ್ಯಾ ಕೇವಲಮೇವ ತುಷ್ಟಹೃದಯಾಂ**
**ತ್ಯಕ್ತ್ವಾನ್ಯ ದೇವಾನಹಂ**
**ಭಕ್ತ್ಯಾ ಮೇ ಹೃದಯಾಂಬುಜೇಽನವರತಂ**
**ವಂದೇ ಸದಾ ಶಾರದಾಮ್ ॥೫॥**

## ನಿಧನ

### ನಂದಳಿಕೆ ಸದಾನಂದರಾಯರು

ಉಡುಪಿ ಬೈಲಕೆರೆಯ ಸಾಯಿರಾಧಾ ಅಪಾರ್ಟ್‌ಮೆಂಟ್‌ನಲ್ಲಿ ವಾಸ್ತವ್ಯದಲ್ಲಿದ್ದ ನಂದಳಿಕೆ ಸದಾನಂದರಾಯರು (78ವರ್ಷ) ದಿನಾಂಕ 04-09-2013ರಂದು ಅಲ್ಪ ಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಗುಂಡೂರಾಯರು

ಪರ್ಕಳ ಸೆಟ್ಟಿಬೆಟ್ಟು ನಿವಾಸಿ ಕುಕ್ಕೆಹಳ್ಳಿ ಗುಂಡೂರಾಯರು(90ವರ್ಷ) ದಿನಾಂಕ 25-08-2013ರಂದು ಮಂಗಳೂರಿನ ಪುತ್ರನ ಮನೆಯಲ್ಲಿ ನಿಧನರಾದರು. ಮೃತರು 4 ಗಂಡು 7 ಹೆಣ್ಣುಮಕ್ಕಳ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಶ್ರೀಮತಿ ಲಕ್ಷ್ಮೀ

ಶಿರ್ವ ಮಟ್ಟಾರು ಸಿ. ರಾಮಕೃಷ್ಣರಾಯರ ಧರ್ಮಪತ್ನಿ ಶ್ರೀಮತಿ ಲಕ್ಷ್ಮೀಯವರು ದಿನಾಂಕ 27-08-2013ರಂದು ನಿಧನರಾದರು. ಮೃತರು ಐವರು ಗಂಡು ಮಕ್ಕಳ ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ಉದಯಾದ್ರಿಯಲ್ಲಿ ಶ್ರೀ ಚಂಡಿಕಾಯಾಗ

ಪಡುಬಿದ್ರಿ ಉದಯಾದ್ರಿ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ದಿನಾಂಕ 12-10-2013ರ ಶನಿವಾರ ದುರ್ಗಾಷ್ಟಮಿಯಂದು ಶ್ರೀ ಚಂಡಿಕಾಯಾಗವು ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನೆರವೇರಲಿದೆ. ಭಕ್ತಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಕಾರ್ಯಕ್ರಮವನ್ನು ಸಂಪನ್ನಗೊಳಿಸಬೇಕೆಂದು ಶ್ರೀ ದೇವಳದ ಆಡಳಿತ ಸಮಿತಿಯು ಕರೆನೀಡಿದೆ.

## ವಿಳಾಸ ಬದಲಾವಣೆ

**PROF. SANTHOOR SUBRAMANYA RAO**
SPARSHA, 10th main, VM Nagar, Post Kunjibettu Udupi 576102
E mail: ssrao52@gmail.com Mobile : 9535270091

★★★ ★★★

**T. R. SHANBHOGUE**
Retd. Bank Executive, "Chaitanya", No.535, 8th Cross, M.S.Ramaiah North City,
Thanisandra Main Road, Nagavara, Bangalore-560 077.

# ಶ್ರೀ ಶಾರದಾ ಮಂಟಪದಲ್ಲಿ ಮಹಿಳಾ ವೇದಿಕೆಯಿಂದ ಆಟಿದೊಂಜಿ ದಿನ ಆಚರಣೆ



ಆಷಾಢ ತಿಂಗಳನ್ನು ಕರಾವಳಿಯಲ್ಲಿ ಆಟಿ ತಿಂಗಳೆಂದು ಕರೆಯುತ್ತಾರೆ. ಇದು ಮಳೆಗಾಲದ ಉತ್ತುಂಗದ ಕಾಲ. ಮೋಡ ಕವಿದ ಜಡಿ ಮಳೆ ಸುರಿಯುವ ತಿಂಗಳದು. ಸೂರ್ಯನ ಬೆಳಕಿನ ಕೊರತೆಯಿಂದ ಗಿಡಗಳಲ್ಲಿ ದ್ಯುತಿಸಂಶ್ಲೇಷಣಾ ಕ್ರಿಯೆಯೂ ಇಳಿಮುಖವಾಗಿರುತ್ತದೆ. ಆದುದರಿಂದ ಈ ತಿಂಗಳಲ್ಲಿ ಹೆಚ್ಚು ವಿಧದ ಹಣ್ಣು, ಹಂಪಲು, ತರಕಾರಿಗಳು ಬೆಳೆಯುವುದಿಲ್ಲ. ಇದಕ್ಕಾಗಿಯೇ ನಮ್ಮ ಹಿರಿಯರು ಬೇಸಿಗೆ ಕಾಲದಲ್ಲಿಯೇ ಆಹಾರ ಪದಾರ್ಥಗಳನ್ನು ಶೇಖರಿಸಿಡುತ್ತಿದ್ದರು. (ಉಪ್ಪಿಗೆ ಹಾಕಿದ ಮಾವು, ಹಲಸಿನ ಸೋಳೆ, ಹಲಸಿನ ಬೀಜ, ಸೌತೆಕಾಯಿ, ಹಪ್ಪಳ ಇತ್ಯಾದಿ) ಈ ತಿಂಗಳಲ್ಲಿ ಕೆಸು,ಚಗಟೆ ಸೊಪ್ಪು ಹೇರಳವಾಗಿ ಬೆಳೆಯುತ್ತದೆ. ಆದುದರಿಂದ ಆಟಿಯ ಆಹಾರದಲ್ಲಿ ಇವುಗಳ ಬಳಕೆ ಹೆಚ್ಚು. ಮಳೆಯಿಂದಾಗಿ ಮನೆಯೊಳಗೇ ಜನ ಬಂಧಿಗಳಾಗಿದ್ದು ಸಮಯ ಕಳೆಯಲು ಚೆನ್ನೆಮಣೆ, ಗಜ್ಜುಗದಂತಹ ಆಟಗಳನ್ನು ಆಡುವುದು ರೂಢಿ. ಆದರೆ ಬೆಳೆಯುತ್ತಿರುವ ಈ ತಂತ್ರಜ್ಞಾನ ಮತ್ತು ಆಧುನಿಕತೆಯಿಂದ ವ್ಯಸ್ತವಾಗಿರುವ ಇಂದಿನ ಜನಾಂಗಕ್ಕೆ ಆಟಿ ತಿಂಗಳ ಕಷ್ಟ, ವೈಶಿಷ್ಟ್ಯ ಮತ್ತು ಸಂಪ್ರದಾಯ ಮರೆತು ಹೋಗಿದೆ ಎಂದೇ ಹೇಳಬಹುದು. ಅದನ್ನು ಮೆಲುಕು ಹಾಕಲು ಇತ್ತೀಚಿನ ದಿನಗಳಲ್ಲಿ ಆಟಿಡೊಂಜಿ ದಿನ-ಆಟಿದೊಂಜಿ ಕೂಟದಂತಹ ಕಾರ್ಯಕ್ರಮಗಳು ಆಯೋಜನೆಗೊಳ್ಳುತ್ತಿವೆ. ಇಂತಹದೇ ಒಂದು ಕಾರ್ಯಕ್ರಮ ಆಯೋಜಿಸುವ ಹುಮ್ಮಸ್ಸು ಮತ್ತು ಪ್ರಯತ್ನವನ್ನು ಶ್ರೀ ಶಾರದಾ ಮಂಟಪದ ಮಹಿಳಾ ವೇದಿಕೆಯ ಮಹಿಳೆಯರು ತೋರಿದರು. ತಾ.15-08-2013ರಂದು ಶ್ರೀ ಶಾರದಾ ಮಂಟಪದಲ್ಲಿ ಆಟಿದೊಂಜಿ ದಿನ ಕಾರ್ಯಕ್ರಮವು 'ವಂದೇ ಮಾತರಂ' ಗೀತೆಯನ್ನು ಹಾಡುವುದರೊಂದಿಗೆ ಪ್ರಾರಂಭಗೊಂಡಿತು. ವಿವಿಧ ಸಾಂಪ್ರದಾಯಿಕ ಆಟಗಳು ಮತ್ತು ಸಾಂಪ್ರದಾಯಿಕ ಖಾದ್ಯಗಳು ಇದರ ವೈಶಿಷ್ಟ್ಯ. ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀಮತಿ ನಿರ್ಮಲಾ ಹರಿಕೃಷ್ಣ ಅವರು ಚೆನ್ನೆಮಣೆ ಆಟವನ್ನು ಸಾಂಕೇತಿಕವಾಗಿ ಆಡುವುದರ ಮೂಲಕ ಕಾರ್ಯಕ್ರಮ ಉದ್ಘಾಟನೆಗೊಂಡಿತು. ತದನಂತರ, 60 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಗಜ್ಜುಗ, 20-40 ವಯೋಮಿತಿಯ ಮಹಿಳೆಯರಿಗೆ ಕುಂಟೆ ಬಿಲ್ಲೆ ಆಟ, 10-20 ವಯೋಮಿತಿಯ ಮಕ್ಕಳಿಗೆ ಟೊಪಿಯಾಟಗಳನ್ನು ಆಯೋಜಿಸಲಾಗಿತ್ತು. ಪುರುಷರಿಗೆ ಮಡಕೆ ಒಡೆಯುವುದು ಮತ್ತು ಸೀರೆ ಉಡುವ ಆಟಗಳನ್ನು ಆಯೋಜಿಸಲಾಗಿತ್ತು. ಎಲ್ಲರೂ ಹುಮ್ಮಸ್ಸಿನಿಂದ ಆಟಗಳಲ್ಲಿ ಭಾಗವಹಿಸಿದರು.

ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ಶ್ರೀಮತಿ ಪ್ರೀತಿ ಎಸ್.ರಾವ್ (ಸಂಚಾಲಕಿ ಮಹಿಳಾ ವೇದಿಕೆ) ನೆರೆದ ಎಲ್ಲರನ್ನು ಸ್ವಾಗತಿಸಿದರು. ಮುಖ್ಯ ಅತಿಥಿಗಳಾದ ಶ್ರೀಮತಿ ನಿರ್ಮಲಾ ಹರಿಕೃಷ್ಣ ಅವರು ತಮ್ಮ ಭಾಷಣದಲ್ಲಿ ಕಥೆಯ ಮೂಲಕ ನಮ್ಮಲ್ಲಿ ಇರಬೇಕಾದ ಧನಾತ್ಮಕ ಆಲೋಚನೆಗಳ ಬಗ್ಗೆ ಗಮನ ಸೆಳೆದರು. ಕೃಷಿಕರಾದ ನಮ್ಮ ಹಿರಿಯರು ಆಟಿ ತಿಂಗಳಲ್ಲಿ ಅನುಭವಿಸುತ್ತಿದ್ದ ಕಷ್ಟಗಳು, ಆಟಿಯ ಆಹಾರ ವೈಶಿಷ್ಟ್ಯ, ಅದರ ವೈಜ್ಞಾನಿಕ ಹಿನ್ನೆಲೆ, ಸೊಸೆಯನ್ನು ತವರು ಮನೆಗೆ ಕಳುಹಿಸಿಕೊಡುವ ಸಂಪ್ರದಾಯದ ವೈಜ್ಞಾನಿಕ ನೆಲೆ ಮತ್ತು ಆಟಿಯಲ್ಲಿ ಆಡುತ್ತಿದ್ದ ಆಟಗಳ ಬಗ್ಗೆ ತಮ್ಮ ಮಾತುಗಳ ಮೂಲಕ ನೆರೆದವರ ಗಮನ ಸೆಳೆದರು. ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಉಡುಪಿ ಇದರ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್ ಅವರು ತುಳು ಭಾಷೆಯಲ್ಲಿ ಅಧ್ಯಕ್ಷೀಯ ನುಡಿಗಳನ್ನಾಡಿ ಮಹಿಳಾ ವೇದಿಕೆಯ ಪ್ರಯತ್ನವನ್ನು ಶ್ಲಾಘಿಸಿದರು. ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ಜಯಲಕ್ಷ್ಮಿ ಮುರಳೀಧರ್ ರಾವ್ ಅವರು ಮುಖ್ಯ ಅತಿಥಿಗಳಿಗೆ ಸಂಘದ ಪರವಾಗಿ ಸ್ಮರಣಿಕೆ ನೀಡಿದರು. ಈ ಸಂದರ್ಭದಲ್ಲಿ ಆಟಗಳಲ್ಲಿ ಉತ್ತಮ ನಿರ್ವಹಣೆ ತೋರಿದವರಿಗೆ ಮುಖ್ಯ ಅತಿಥಿಗಳ ಮೂಲಕ ಕಿರು ಕಾಣಿಕೆ ನೀಡಿ ಗುರುತಿಸಲಾಯಿತು. ಶ್ರೀಮತಿ ಪ್ರಸನ್ನಾ ಪ್ರಕಾಶ್ ವಂದಿಸಿದರು. ಕು| ವೃಂದಾ ಕೆ.ರಾವ್ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ರಜನಿ ಹೆಬ್ಬಾರ್ ಸಹಕರಿಸಿದರು. ರಾಷ್ಟ್ರಗೀತೆಯೊಂದಿಗೆ ದೇಶಕ್ಕೆ ಸ್ವಾತಂತ್ರ್ಯ ದಿನಾಚರಣೆಯ ಗೌರವ ಸಲ್ಲಿಸುವುದರೊಂದಿಗೆ ಸಭಾಕಾರ್ಯಕ್ರಮ ಕೊನೆಗೊಂಡಿತು.

ನಂತರದ ಆಹಾರ ಕೂಟದಲ್ಲಿ ಬಗೆ ಬಗೆಯ ಸಾಂಪ್ರದಾಯಿಕ ಖಾದ್ಯಗಳಾದ ಮಿಡಿ ಉಪ್ಪಿನಕಾಯಿ, ಹಲಸಿನ ಸೋಳೆ ಪಲ್ಯ, ಮಾವಿನ ಬಜ್ಜಿ, ತಿಮರೆ ತಂಬ್ಳೀ, ಕುಚ್ಚಿಗೆ ಮತ್ತು ಬೆಳ್ತಿಗೆ ಅನ್ನ, ಹುರುಳಿ ಸಾರು, ಈರಡ್ಡಿಗೆ, ಪತ್ರೊಡೆ, ಶೇವಿಗೆ, ಹಾಲುಬಾಯಿ, ತೊಗಟೆ ಸೊಪ್ಪಿನ ಅಂಬಡೆ, ಹಲಸಿನ ಪಾಯಸವನ್ನು ಎಲ್ಲರೂ ಸವಿದರು.

ಹಳೆಯ ನೆನಪು, ಹಳೆಯ ಸಂಪ್ರದಾಯವನ್ನು ಮೆಲುಕು ಹಾಕುವ ಒಂದು ಕಾರ್ಯಕ್ರಮ ಇದಾಗಿತ್ತು. ಈ ಕಾರ್ಯಕ್ರಮ ಯಶಸ್ವಿಗೊಳ್ಳಲು ಸಹಕರಿಸಿದ ಮಹಿಳಾ ವೇದಿಕೆಯ ಎಲ್ಲಾ ಸದಸ್ಯರಿಗೂ ಹೃತ್ಪೂರ್ವಕ ವಂದನೆಗಳು.

-ಶ್ರೀಮತಿ ಪ್ರೀತಿ ಎಸ್.ರಾವ್,
ಸಂಚಾಲಕಿ ಮಹಿಳಾ ವೇದಿಕೆ
(ಉಪನ್ಯಾಸಕಿ : ಡಾ|.ಟಿ.ಎಂ.ಎ.ಪೈ.ಶಿಕ್ಷಣ ಮಹಾವಿದ್ಯಾಲಯ)

## ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಿನಿ ಕೆ

■...1ನೇ ಪುಟದಿಂದ

ಇವೆಲ್ಲವನ್ನು ವಿಶೇಷ ಶ್ರಮವಹಿಸಿ ಸಾಧಿಸಿದ್ದಾರೆ. ಮೇನಾಲ ಮತ್ತು ನನ್ಯ ಈ ಎರಡೂ ಶಾಲೆಗಳಲ್ಲಿ ಸುವರ್ಣ ಮಹೋತ್ಸವವನ್ನು ಅದ್ದೂರಿಯಾಗಿ ನಡೆಸಿದ ಹಿರಿಮೆ ಅವರದು. ಅತ್ಯುತ್ತಮ ಶಿಕ್ಷಕಿಯಾಗಿ ಪಾಠ ಪ್ರವಚನಗಳಲ್ಲಿ ತೊಡಗಿಸಿಕೊಂಡಿರುವ ಶ್ರೀಮತಿ ಸರೋಜಿನಿಯವರು ಶೈಕ್ಷಣಿಕ ಅಭಿವೃದಿಯ ನಿಟ್ಟಿನಲ್ಲಿಯೂ ಶ್ರಮಿಸಿದ್ದಾರೆ. ಶೈಕ್ಷಣಿಕ ಕಾರ್ಯಾಗಾರಗಳು, ಎನ್.ಎಸ್.ಎಸ್. ಶಿಬಿರಗಳು, ವಾರ್ಷಿಕೋತ್ಸವಗಳು, ಪ್ರತಿಭಾ ಕಾರಂಜಿಗಳು, ಎಸ್.ಡಿ.ಎಂ.ಸಿ, ತರಬೇತಿ ಕಾರ್ಯಾಗಾರಗಳು, ತಾಲೂಕು ಮಟ್ಟದ ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮ, ವ್ಯಕ್ತಿತ್ವ ವಿಕಸನ ಕಾರ್ಯಾಗಾರಗಳು, ಆರೋಗ್ಯ ಶಿಬಿರಗಳು, ಚಿತ್ರಕಲಾ ಶಿಬಿರಗಳು, ಶಾರದೋತ್ಸವ, ಪ್ರತಿಭಾ ದಿನೋತ್ಸವಗಳನ್ನು ಶಾಲೆಯಲ್ಲಿ ಸಂಘಟಿಸಿ ಅಪೂರ್ವ ಸಾಧನೆ ಮಾಡಿದ್ದಾರೆ. ಕ್ರೀಡಾ ಸಾಧನೆಯಲ್ಲಿ ಶಾಲಾ ಮಕ್ಕಳು ಖೋ ಖೋ ಆಟದಲ್ಲಿ ತಾಲೂಕು, ಜಿಲ್ಲೆ ಮತ್ತು ವಿಭಾಗ ಮಟ್ಟದ ವರೆಗೆ ನಿರಂತರ 3 ವರ್ಷಗಳಿಂದ ಸಾಧನೆ, ಆರೋಗ್ಯ ಸಂಘ, ಕ್ರೀಡಾ ಸಂಘ, ಇಕೋ ಕ್ಲಬ್, ವಿಜ್ಞಾನ ಸಂಘ, ತಾಯಂದಿರ ಸಂಘ ಇವೆಲ್ಲವುಗಳ ಮೂಲಕ ಶಿಕ್ಷಣ ಚಟುವಟಿಕೆಗಳನ್ನು ಹಮ್ಮಿಕೊಂಡ ಸರೋಜಿನಿಯವರು ಮೇನಾಲ ಶಾಲೆಯ ಕೀರ್ತಿಯನ್ನು ಬೆಳಗಿಸಿದ್ದಾರೆ.

ವಿಶೇಷ ಅಗತ್ಯವುಳ್ಳ ಮಕ್ಕಳ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ವಹಿಸಿದ ಸರೋಜಿನಿಯ ವರು ವೈಯುಕ್ತಿಕವಾಗಿ ಕಾರ್ಯಕ್ರಮಗಳ ಅತ್ಯುತ್ತಮ ಸಂಘಟಕಿ, ಕಾರ್ಯ ನಿರೂಪಕಿ, ಉತ್ತಮ ವಾಗ್ಮಿ, ನಾಟಕ ನೃತ್ಯ ಸಂಗೀತಗಳ ತರಬೇತಿದಾರರಾಗಿ ತೀರ್ಪುಗಾರರಾಗಿ ಮಿಂಚಿದವರು. ಸಾಕ್ಷರತಾ ಆಂದೋಲನ, ವಯಸ್ಕರ, ಶಿಕ್ಷಣ ಸ್ವಸಹಾಯ ಗುಂಪುಗಳ ಚಟುವಟಿಕೆಯಲ್ಲಿ ಪಾತ್ರವಹಿಸಿದವರು. ಪರಿಸರವಾದಿಯಾಗಿ, ಸಂವಹನಕಾರರಾಗಿ ಪ್ರಸಿದ್ಧಿ ಪಡೆದವರು. ಸಾಹಿತ್ಯ, ಸಂಸ್ಕೃತಿಯಲ್ಲಿ ಪ್ರೀತಿಯುಳ್ಳ ಅವರು ಪ್ರಬಂಧ, ಚುಟುಕು, ಕಾವ್ಯ, ವೈಚಾರಿಕ ಲೇಖನ, ಆಶು ಕವನ ಬರೆಯುವುದರಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದಾರೆ.

ಅವರಿಗೆ ಈಗಾಗಲೇ 2002ರಲ್ಲಿ ಜನ ಮೆಚ್ಚಿದ ಶಿಕ್ಷಕ ಪ್ರಶಸ್ತಿ, 2010-11ರಲ್ಲಿ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, 2010-11ರಲ್ಲಿ ರಾಜ್ಯ ಮಟ್ಟದ ಡಾ| ರಾಧಾಕೃಷ್ಣನ್ ಅತ್ಯುತ್ತಮ ಎಸ್.ಡಿ.ಎಂ.ಸಿ ಕಾರ್ಯದರ್ಶಿ ಪ್ರಶಸ್ತಿ, 2011-12ರಲ್ಲಿ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ, 2011-12ರಲ್ಲಿ ಬಾಬು ಜಗಜೀವನ ರಾಮ್ ಫೌಂಡೇಶನ್ ದೆಹಲಿ ಇಲ್ಲಿಂದ ಸಾವಿತ್ರಿ ಬಾಯಿ ಪುಲೇ ನ್ಯಾಶನಲ್ ಫೆಲೋಶಿಪ್ ಎವಾರ್ಡ್ ಬಂದಿದ್ದು, ಇವೆಲ್ಲಕ್ಕೆ ಕಿರೀಟಪ್ರಾಯವಾಗಿ 2012ನೇ ಸಾಲಿನ ಪ್ರತಿಷ್ಠಿತ ಅತ್ಯುತ್ತಮ ಶಿಕ್ಷಕಿ ರಾಷ್ಟ್ರ ಪ್ರಶಸ್ತಿಯನ್ನು ನವದೆಹಲಿಯಲ್ಲಿ ಅವರು ಪಡೆದುಕೊಂಡಿದ್ದು, ಪುತ್ತೂರು ತಾಲೂಕಿಗೆ ಹೆಮ್ಮೆಯ ವಿಷಯವೇ ಸರಿ.

ಸರಳ ಸಜ್ಜನಿಕೆಯ ಮತ್ತು ನಿಗರ್ವಿ ಹಾಗೂ ವಿನಯ ಸಂಪನ್ನತೆಯ ಶ್ರೀಮತಿ ಸರೋಜಿನಿ ಅವರದ್ದು "ಸಂತೃಪ್ತಿ" ಎಂಬ ಮನೆಯಲ್ಲಿ ಸಂತೃಪ್ತಿಯ ಸಂಸಾರ. ಅವರ ಪತಿ ವಿ. ನಾಗಪಯ್ಯನವರು ಮುಖ್ಯಗುರುಗಳಾಗಿ ನಿವೃತ್ತರಾದವರು. ಮಗ ಪ್ರವೀಣಚಂದ್ರ ಹಾಗೂ ಸೊಸೆ ಪಲ್ಲವಿ ಪ್ರವೀಣಚಂದ್ರ ಪ್ರಕೃತ ಅಮೆರಿಕಾದ ಸಿಯಾಟಲ್‌ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ಗಳಾಗಿದ್ದು, ಮಗಳು ಚೇತನ ಶಶಿಕಾಂತ್ ಗೃಹಿಣಿಯಾಗಿ, ಅಳಿಯ ಶಶಿಕಾಂತ್ ಎಸ್. ದಿಯಾ ಸಿಸ್ಟಮ್ ಮಂಗಳೂರಿನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು ಮೊಮ್ಮಕ್ಕಳು ಬೇಬಿ ನಿಯತಿ ರಾವ್, ಸಂಸ್ಕೃತಿ ರಾವ್ ಮತ್ತು ಸಮರ್ಥ್ ಇವರೆಲ್ಲರ ಜೊತೆ ಸರೋಜಿನಿಯವರು ಸಾರ್ಥಕ ಬದುಕು ನಡೆಸುತ್ತಿದ್ದಾರೆ.

ಶ್ರೀಮತಿ ಸರೋಜಿನಿಯವರ ಈ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು : ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ



ಶ್ರೀ ಸುಬ್ರಹ್ಮಣ್ಯ ಸಭಾ (ರಿ.) ಮಂಗಳೂರು ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ತಾ.01-09-2013 ಆದಿತ್ಯವಾರದಂದು ಆಚರಿಸ ಲಾಯಿತು. ಬೆಳಿಗ್ಗೆ ವಿಷ್ಣು ಸಹಸ್ರನಾಮ ಪಾರಾಯಣದೊಂದಿಗೆ ಆರಂಭವಾದ ಕಾರ್ಯಕ್ರಮ ಮುದ್ದು ಕೃಷ್ಣ ವೇಷ ಸ್ಪರ್ಧೆ, ಭಗವದ್ಗೀತೆ ಕಂಠಪಾಠ ಸ್ಪರ್ಧೆ, ಭಕ್ತಿಗೀತೆ ಸ್ಪರ್ಧೆ, ಚಕ್ಕುಲಿ ಸಂಖ್ಯಾ ಊಹನೆ ಮಾಡುವ ಸ್ಪರ್ಧೆಗಳು ನಡೆದವು, ಮಧ್ಯಾಹ್ನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀ ಕೃಷ್ಣನ ಬಗ್ಗೆ ರಸಪ್ರಶ್ನೆ, ಪುಟಾಣಿಗಳಿಂದ ನೃತ್ಯ, ಭರತನಾಟ್ಯ, ಮಹಿಳೆಯರಿಂದ ಸಮೂಹ ನೃತ್ಯ ಹಾಗೂ ಪುರುಷರಿಂದ ಸಮೂಹ ನೃತ್ಯಗಳು ನಡೆದವು. ಶ್ರೀಮತಿ ಶೈಲಜಾ ಶ್ರೀಕಾಂತ್ ಮತ್ತು ಶ್ರೀ ವಿದ್ಯಾರಣ್ಯ ಕಾರ್ಯಕ್ರಮ ಸಂಯೋಜಿಸಿದರೆ ಶ್ರೀಯುತ ನಾಗರಾಜ್ ಪಕ್ಕಾಡಿ ಮತ್ತು ಶ್ರೀ ಪಿ. ಶ್ರೀಕಾಂತ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ರಮೇಶ್ ಕೆ. ಶ್ರೀಕೃಷ್ಣನ ಬಗ್ಗೆ ರಸಪ್ರಶ್ನೆ ನಡೆಸಿದರು. ಬಹುಮಾನ ವಿತರಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

-ಶ್ರೀ ಪಿ.ಶ್ರೀಕಾಂತ ರಾವ್

## ಬಳ್ಪ ದೇವಸ್ಥಾನಕ್ಕೆ ಕೊಡುಗೆ

ಲಯನ್ಸ್‌ಕ್ಲಬ್ ಮತ್ತು ಲಯನೆಸ್‌ಕ್ಲಬ್, ಮಂಗಳೂರು ಇವರು ಬಳ್ಪ ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ 150 ಸ್ಟೀಲ್ ಬಟ್ಟಲುಗಳನ್ನು ಭಕ್ತಾದಿಗಳ ಉಪಯೋಗಕ್ಕಾಗಿ ಉದಾರವಾಗಿ ನೀಡಿರುತ್ತಾರೆ. ಕ್ಲಬ್‌ನ ಅಧ್ಯಕ್ಷ ಡಾ.ಅರವಿಂದರಾವ್ ಕೇದಿಗೆ, ಕಾರ್ಯದರ್ಶಿ ನಾಗರಾಜ ಶರ್ಮ, ಖಜಾಂಜಿ ರಘುವೀರರಾವ್, ಶ್ರೀಮತಿ ಗಾಯತ್ರಿ ಅರವಿಂದರಾವ್ ಇವರುಗಳು ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಖಜಾಂಚಿ ಶ್ರೀ ಕರುಣ್‌ರಾವ್ ಬೆಳ್ಳೆಯವರ ಉಪಸ್ಥಿತಿಯಲ್ಲಿ ಬಟ್ಟಲುಗಳನ್ನು ನೀಡಿ ಶ್ರೀದೇವಿಯ ಪ್ರಸಾದವನ್ನು ಸ್ವೀಕರಿಸಿದರು.

## ಮಾಂಗಲ್ಯಂ ತಂತುನಾನೇನ ....

ಕಾರ್ಕಳ ತೆಳ್ಳಾರು ಶ್ರೀಮತಿ ಪ್ರೇಮಾ ಮತ್ತು ಶ್ರೀ ಸದಾಶಿವರಾಯರ ಪುತ್ರ ವಿಶಾಖ ಎಸ್ ರಾವ್ ಹಾಗೂ ಶ್ರೀಮತಿ ಉಷಾ ಮತ್ತು ಶ್ರೀ ಮುರಳೀಧರರಾಯರ ಪುತ್ರಿ ಅರ್ಚನಾ ಇವರ ವಿವಾಹವು ದಿನಾಂಕ 15-08-2013ರಂದು ಕಾಪು ಶ್ರೀ ಲಕ್ಷ್ಮೀಜನಾರ್ದನ ಸಭಾ ಭವನದಲ್ಲಿ ನೆರವೇರಿತು.

★★★★

ಮಾರಣ ಕಟ್ಟೆ ದಿ। ಶಂಕರ ಉಡುಪರ ಪುತ್ರ ಸುಬ್ರಹ್ಮಣ್ಯ ಹಾಗೂ ಶ್ರೀಮತಿ ಗೀತಾ ಮತ್ತು ಸಕ್ಕಟ್ಟು ಶ್ರೀ ಮಂಜುನಾಥಯ್ಯನವರ ಪುತ್ರಿ ಉಜ್ವಲಾ ಇವರ ವಿವಾಹವು ದಿನಾಂಕ 25-08-2013ರಂದು ಸೌಕೂರು ಶ್ರೀದುರ್ಗಾಪರಮೇಶ್ವರಿ ಸಭಾ ಭವನದಲ್ಲಿ ನೆರವೇರಿತು.

★★★★

ಕರ್ವಾಲು ಶ್ರೀ ಚಂದ್ರಶೇಖರ ರಾವ್ ಮತ್ತು ಶ್ರೀಮತಿ ವಸಂತಿಯವರ ಪುತ್ರ ಸುಭಾಷ್ ಹಾಗೂ ಪೆರ್ಡೂರು ಶ್ರೀ ಪದ್ಮನಾಭರಾವ್ ಮತ್ತು ಶ್ರೀಮತಿ ಶಾಮಲಾರವರ ಪುತ್ರಿ ಪವಿತ್ರ ಇವರ ವಿವಾಹವು 30-08-2013ರಂದು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

## ಗೃಹಪ್ರವೇಶ

ಶ್ರೀ ನವೀನ್ ಉಪ್ಪುಂದ (ಶ್ರೀಮತಿ ಗಾಯತ್ರಿ ಮತ್ತು ಶ್ರೀ ಮನೋಹರ್ ರಾವ್ ಉಪ್ಪುಂದ ಇವರ ಪುತ್ರ) ಹಾಗೂ ಶ್ರೀಮತಿ ಸೌಮ್ಯ ಇವರು ಬೆಂಗಳೂರಿನ ವಿದ್ಯಾರಣ್ಯಪುರದಲ್ಲಿ ನಿರ್ಮಿಸಿದ ನೂತನ ಗೃಹ 'ಗಾಯತ್ರಿ ವಿಹಾರ'ದ ಪ್ರವೇಶೋತ್ಸವವನ್ನು ತಾ.30-8-2013ರಂದು ನೆರವೇರಿಸಿದರು.

★★★ ★★★

ಶ್ರೀ ಗಣೇಶ್ ಪ್ರಸಾದ್ (ಶ್ರೀಮತಿ ಕುಸುಮ ಮತ್ತು ಶ್ರೀ ಹೆಚ್.ಎಲ್.ರಾವ್ ಅಳದಂಗಡಿ ಇವರ ಪುತ್ರ) ಹಾಗೂ ಶ್ರೀಮತಿ ಸಹನ ಇವರು ಬೆಂಗಳೂರಿನ ಹೊರಮಾವಿನಲ್ಲಿ ನಿರ್ಮಿಸಿದ ನೂತನ ಗೃಹದ ಪ್ರವೇಶೋತ್ಸವವನ್ನು ತಾ.28-8-2013ರಂದು ನೆರವೇರಿಸಿದರು.

## ಶುಭ ಜನನ

ಮುಂಬಯಿ ಅಂದೇರಿಯಲ್ಲಿ ವಾಸ್ತವ್ಯದಲ್ಲಿರುವ ಡಾ। ರೋಹನ್ ಬೆಳ್ಳೆ (ಶ್ರೀ ಅಮೃತ್ ಬೆಳ್ಳೆ ಹಾಗೂ ಶ್ರೀಮತಿ ಶೋಭಾರವರ ಪುತ್ರ) ಹಾಗೂ ಶ್ರೀಮತಿ ಅನುಷಾ ಬೆಳ್ಳೆ ಇವರಿಗೆ ತಾ.17-7-2013ರಂದು ಹೆಣ್ಣು ಶಿಶುವಿನ ಜನನ.

## ಕನ್ಯಾ ಮಾಸದ ವಿಶೇಷ ದಿನಗಳು

| | |
|---|---|
| 16-09-2013 | ಕನ್ಯಾ ಸಂಕ್ರಮಣ, |
| 18-09-2013 | ಅನಂತ ಚತುರ್ದಶೀ |
| 19-09-2013 | ಪೂರ್ಣಿಮಾ |
| 20-09-2013 | ಮಹಾಲಯಾರಂಭ |
| 22-09-2013 | ಸಂಕಷ್ಟ ಚತುರ್ಥಿ (ಚಂದ್ರೋದಯ ರಾತ್ರಿ 8.36) |
| 24-09-2013 | ಪಂಚಮಿ |
| 26-09-2013 | ಹಸ್ತಾ ನಕ್ಷತ್ರಾರಂಭ |
| 30-09-2013 | ಸರ್ವೇಕಾದಶೀ |
| 02-10-2013 | ಪ್ರದೋಷ |
| 04-10-2013 | ಸರ್ವ ಪಿತೃ ಅಮವಾಸ್ಯಾ |
| 05-10-2013 | ನವರಾತ್ರಿ ಆರಂಭ |
| 09-10-2013 | ಲಲಿತಾ ಪಂಚಮಿ |
| 10-10-2013 | ಚಿತ್ರಾ ನಕ್ಷತ್ರಾರಂಭ |
| 13-10-2013 | ಮಹಾನವಮಿ |
| 14-10-2013 | ವಿಜಯ ದಶಮಿ |
| 15-10-2013 | ಸರ್ವೇಕಾದಶೀ |
| 16-10-2013 | ಪ್ರದೋಷ |
| 17-10-2013 | ತುಲಾ ಸಂಕ್ರಮಣ |

# ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ



ಡಾ। ವೈ. ಸುದರ್ಶನ ರಾವ್

**ಭಾಗ-1**

**ಪ್ರಶ್ನೆ : ಇನ್ಫೆಕ್ಷನ್ (infection) ಆಗುವುದು ಎಂದರೇನು? ಇದರ ಚಿಕಿತ್ಸೆ ಹೇಗೆ?**

**ಉತ್ತರ :** ನಮ್ಮ ದೇಹಕ್ಕೆ ಬರುವ ಖಾಯಿಲೆಗಳಲ್ಲಿ ಬಹುತೇಕ ಖಾಯಿಲೆಗಳು ಇನ್ಫೆಕ್ಷನ್‌ನಿಂದ ಆಗುವಂತಾದ್ದೇ ಆಗಿವೆ. ಬೇರೆ ರೀತಿಯಿಂದ ಖಾಯಿಲೆ ಶುರುವಾಗಿದ್ದರೂ ಕೆಲವೊಮ್ಮೆ ಅದು ಇನ್ಫೆಕ್ಷನ್‌ನಿಂದಾಗಿ ಉಲ್ಬಣಿಸುವುದುಂಟು. ಹಾಗಾಗಿ ವೈದ್ಯರಲ್ಲಿ ನೀವು ನಿಮಗೆ ಬಂದ ಖಾಯಿಲೆಗೆ ಕಾರಣವೇನೆಂದು ಕೇಳಿದಾಗ ಹೆಚ್ಚಿನ ಸಮಯದಲ್ಲಿ ಇನ್ಫೆಕ್ಷನ್ ಎಂದೇ ಉತ್ತರ ಬರುವುದನ್ನು ನೀವು ಗಮನಿಸಿರಬಹುದು. ಇನ್ಫೆಕ್ಷನ್ ಎಂದರೆ ನಮ್ಮ ದೇಹಕ್ಕೆ ಇನ್ನೊಂದು ಜೀವಿಯ ಆಕ್ರಮಣವಾಗುವುದು ಎಂದರ್ಥ. ಕಣ್ಣಿಗೆ ಕಾಣಿಸದ ಸೂಕ್ಷ್ಮ ಜೀವಿಗಳಿಂದ ಆಕ್ರಮಣವಾಗುವುದನ್ನು ಇನ್ಫೆಕ್ಷನ್ ಎಂದು ಕರೆದರೆ, ಅದೇ ಸ್ವಲ್ಪ ದೊಡ್ಡ ಜಂತುಗಳಿಂದಾಗಿದ್ದರೆ ಅದನ್ನು ಇನ್ಫೆಸ್ಟೇಶನ್ (infestation) ಎಂದು ಸ್ವಲ್ಪ ಬೇರೆ ಹೆಸರಿನಿಂದ ಕರೆಯುತ್ತಾರೆ.

ಸೂಕ್ಷ್ಮಜೀವಿಗಳೆಂದರೆ ಒಂದೇ ಜೀವಕೋಶವಿರುವ ದೇಹವನ್ನು ಹೊಂದಿರುವ,ಸೂಕ್ಷ್ಮದರ್ಶಕದ ಮೂಲಕ ಮಾತ್ರವೇ ಕಾಣಬಹುದಾದ ಏಕಾಣು ಜೀವಿಗಳು. ನಮ್ಮ ಇಡೀ ಭೂಮಂಡಲದಲ್ಲಿ ಏಕಾಣುಜೀವಿಗಳಿಲ್ಲದ ಜಾಗವೆ ಇಲ್ಲವೆನ್ನಬಹುದು. ಈ ಜೀವಿಗಳು ಇನ್ನೊಂದು ಜೀವಿಯ ದೇಹದಲ್ಲೇ (ಜೀವಂತ ಇಲ್ಲವೇ ಸತ್ತ) ಜೀವಿಸುತ್ತವೆ. ಒಂದು ವೇಳೆ ಜೀವಿಸಲು ಅಂತಹಾ ಪರಿಸರ ಸಿಗದಿದ್ದರೆ ಬೀಜದ (spores) ರೂಪದಲ್ಲಿ ವರ್ಷಗಟ್ಟಲೆ ಮಣ್ಣಿನಲ್ಲಿ, ಗಾಳಿಯಲ್ಲಿ ತೇಲಾಡಿಕೊಂಡಿರುತ್ತವೆ. ಕೆಲವು ಸೂಕ್ಷ್ಮಜೀವಿಗಳು ಸತ್ತ ದೇಹಗಳಲ್ಲಿ ಜೀವಿಸಿದರೆ (ಬಿದ್ದ ಎಲೆಗಳನ್ನು, ಹೆಣಗಳನ್ನು, ಹಣ್ಣು ತರಕಾರಿಗಳನ್ನು ಕೊಳೆಸುವುದು ಇದೇ ಸೂಕ್ಷ್ಮಜೀವಿಗಳು), ಇನ್ನು ಕೆಲವು ಜೀವಂತ ಪ್ರಾಣಿಗಳ ದೇಹದಲ್ಲಿ ಮಾತ್ರ ಜೀವಿಸಬಲ್ಲುವು. ಸೂಕ್ಷ್ಮ ಜೀವಿಗೆ ಆಶ್ರಯ ಕೊಟ್ಟ ದೊಡ್ಡ ಜೀವಿಯ ದೇಹಕ್ಕೆ ಅದರಿಂದ ಹಾನಿಯಾಗುತ್ತದೆ. ಈ ಹಾನಿಯನ್ನೇ ಆ ಸೂಕ್ಷ್ಮಜೀವಿಯಿಂದ ಬರುವ ಖಾಯಿಲೆ ಎಂದು ಗುರುತಿಸುವರು. ಕೆಲವು ಸೂಕ್ಷ್ಮಜೀವಿಗಳು ಕೇವಲ ಮನುಷ್ಯನಿಗೆ ಮಾತ್ರ ಖಾಯಿಲೆ ತರುವಂತಹವಾಗಿದ್ದರೆ ಇನ್ನು ಕೆಲವು ಮನುಷ್ಯ ಹಾಗೂ ಇತರ ಪ್ರಾಣಿಗಳಲ್ಲೂ ಖಾಯಿಲೆ ತರುತ್ತವೆ.

ಈ ಸೂಕ್ಷ್ಮಜೀವಿಗಳನ್ನು ಬ್ಯಾಕ್ಟೀರಿಯಾ, ವೈರಸ್ ಹಾಗೂ ಫಂಗಸ್ ಎಂದು ಮುಖ್ಯವಾಗಿ ಮೂರು ವಿಧವಾಗಿ ವಿಂಗಡಿಸಬಹುದು. ಈ ಮೂರೂ ಅಲ್ಲದೇ ಇನ್ನೂ ಬೇರೆ ಜಾತಿಗೆ ಸೇರಿದ ಕೆಲವು ಸೂಕ್ಷ್ಮಜೀವಿಗಳಿವೆ. (ಉದಾ : ಅಮೀಬಾ). ಆದರೆ ಮೇಲಿನ ಮೂರು ಅತಿ ಸಾಮಾನ್ಯವಾಗಿ ಮನುಷ್ಯನಿಗೆ ಖಾಯಿಲೆ ತರುವ ಸೂಕ್ಷ್ಮಜೀವಿಗಳು. ಅವುಗಳಲ್ಲಿ ಬ್ಯಾಕ್ಟೀರಿಯಗಳು ಹಾಗೂ ವೈರಸ್‌ಗಳು ಮೊದಲನೆಯ ಹಾಗೂ ಎರಡನೆಯ ಸ್ಥಾನಕ್ಕೆ ಸ್ಪರ್ಧೆಯಲ್ಲಿದ್ದರೆ, ಫಂಗಸ್ ಮೂರನೆಯ ಸ್ಥಾನದಲ್ಲಿದೆ. ಬ್ಯಾಕ್ಟೀರಿಯಾಗಳನ್ನು ಅಂಟಿಬಯಟಿಕ್ ಎಂಬ ಔಷಧಗಳ ಮೂಲಕ ಸುಲಭವಾಗಿ ಕೊಲ್ಲಬಹುದು. ವೈರಸ್‌ಗಳನ್ನು ಕೊಲ್ಲುವ ಔಷಧಿಗಳಿದ್ದರೂ ಆಂಟಿಬಯಾಟಿಕ್‌ಗಳು ಬ್ಯಾಕ್ಟೀರಿಯಾದ ಮೇಲೆ ಪರಿಣಾಮಕಾರಿಯಾಗಿರುವಷ್ಟು ಇವು ಪರಿಣಾಮಕಾರಿಯಾಗಿಲ್ಲ. ಫಂಗಸ್ ಇನ್ಫೆಕ್ಷನ್ ಹೆಚ್ಚಾಗಿ ಚರ್ಮದ ಮೇಲೆ ಬರುವ ಸಿಬ್ಬ ಅಥವಾ ರಿಂಗ್‌ವರ್ಮ್ ಕಾಯಿಲೆಗಳಿಗೆ ಕಾರಣ. ಇದನ್ನು ಗುಣಪಡಿಸಲು ಪರಿಣಾಮಕಾರಿ ಔಷಧಗಳಿದ್ದರೂ ಗುಣನಿಧಾನ. ದೇಹದ ಇತರ ಅಂಗಗಳ ಮೇಲೆ ಫಂಗಸ್‌ನಿಂದ ಖಾಯಿಲೆ ಬರುವುದು ಅಪರೂಪ, ಬಂದರೆ ಗುಣಪಡಿಸುವುದು ಕಷ್ಟ. ಈ ಮೂರಕ್ಕೆ ಹೊರತಾದ ಇತರ ಸೂಕ್ಷ್ಮಜೀವಿಗಳಿಂದ ಬರುವ ಕಾಯಲೆಗಳಿಗೆ ಉದಾಹರಣೆಗಳೆಂದರೆ ಅಮೀಬಿಯಾಸಿಸ್, ಮಲೇರಿಯಾ, ಇಲಿಜ್ವರ, ಸಿಫಿಲಿಸ್ ಇತ್ಯಾದಿ. ಇವುಗಳನ್ನೂ ಕೊಲ್ಲುವ ಉತ್ತಮ ಔಷಧಿಗಳಿವೆ.

ಸೂಕ್ಷ್ಮಜೀವಿಗಳು ನಮ್ಮ ದೇಹವನ್ನು ಪ್ರವೇಶಿಸುವುದು ಹೇಗೆ? ನಮ್ಮ ಇಡಿ ದೇಹವನ್ನು ಚರ್ಮವು ಆವರಿಸಿದೆ ಹಾಗೂ ಈ ಚರ್ಮವು ಅಷ್ಟು ಸುಲಭದಲ್ಲಿ ಸೂಕ್ಷ್ಮಜೀವಿಗಳನ್ನು ದೇಹದೊಳಗೆ ಪ್ರವೇಶಿಸಲು ಬಿಡುವುದಿಲ್ಲ. ಆದರೆ ಗಾಯದ ಮೂಲಕ, ಶಸ್ತ್ರಚಿಕಿತ್ಸೆಯ ಗಾಯದ ಮೂಲಕ, ಚೂಪಾದ ವಸ್ತು ಚುಚ್ಚುವುದರ ಮೂಲಕ, ಕಚ್ಚಿದ ಗಾಯದ ಮೂಲಕ ಹೊರಗಿನಿಂದ ಸೂಕ್ಷ್ಮಜೀವಿಗಳು ದೇಹವನ್ನು ಪ್ರವೇಶಿಸುತ್ತವೆ. ಸೆಲ್ಯುಲೈಟಿಸ್ ಎಂಬ ಕಾಲು ಅಥವ ಕೈ ಅಥವ ದೇಹದ ಯಾವುದೇ ಭಾಗದ ಚರ್ಮವು ಕೆಂಪಗಾಗಿ, ಊದಿಕೊಂಡು ಕೀವಾಗುವ ಕಾಯಿಲೆ, ಟೆಟನಸ್, ನಾಯಿ ಕಚ್ಚಿ ಬರುವ ರೇಬಿಸ್ ಕಾಯಿಲೆಗಳು ಬರುವುದೇ ಹೀಗೆ. ಅದೇ ರೀತಿ ಸೊಳ್ಳೆಗಳು ಮಲೇರಿಯಾ, ಫೈಲೇರಿಯ, ಡೆಂಗ್ಯೂ, ಚಿಕನ್ಗುನ್ಯಾ ರೋಗಾಣುಗಳನ್ನು ಚರ್ಮಕ್ಕೆ ಚುಚ್ಚಿ ನೇರವಾಗಿ ದೇಹಕ್ಕೆ ಸೇರಿಸುತ್ತವೆ.

ನಾವು ಉಸಿರಾಡುವ ಗಾಳಿಯಲ್ಲೂ ನೂರಾರು ನಮೂನೆಯ ಸೂಕ್ಷ್ಮಜೀವಿಗಳಿವೆ. ರೋಗಿಯು ಉಸಿರಾಡಿ ಬಿಟ್ಟ ಗಾಳಿಯಲ್ಲಿ ಈ ಜೀವಿಗಳು ಜಾಸ್ತಿ ಇರುತ್ತವೆ. ಹಾಗಾಗಿ ರೋಗಿಯ ಹತ್ತಿರ ನಾವಿದ್ದು ಅವನು ಉಸಿರಾಡಿ ಬಿಟ್ಟ ಗಾಳಿಯನ್ನು ನಾವು ಸೇವಿಸಿದರೆ ಅಥವಾ ಕಲುಷಿತ ಗಾಳಿಯನ್ನು ಸೇವಿಸಿದರೆ ಆಗ ಆ ಸೂಕ್ಷ್ಮಜೀವಿಗಳು ಉಸಿರಿನೊಂದಿಗೆ ನಮ್ಮ ಶ್ವಾಸಕೋಶವನ್ನು ಸೇರಿಕೊಳ್ಳುತ್ತವೆ. ಶೀತನೆಗಡಿ, ಗಂಟಲುನೋವು, ಟಾನ್ಸಿಲೈಟಿಸ್, ಬ್ರಾಂಕೈಟಿಸ್, ನ್ಯುಮೋನಿಯಾ, ಟ್ಯುಬರ್ಕ್ಯುಲೋಸಿಸ್ ಇತ್ಯಾದಿ ಖಾಯಿಲೆಗಳು ಈ ದಾರಿಯಲ್ಲಿ ನಮ್ಮ ದೇಹವನ್ನು ಪ್ರವೇಶಿಸಿ ಉಸಿರಾಟದ ಅಂಗಗಳ ಖಾಯಿಲೆಯನ್ನು ತರುತ್ತವೆ. ಇನ್ನು ಕೆಲವು ರೋಗಾಣುಗಳು ಉಸಿರಾಟದ ಮೂಲಕ ದೇಹವನ್ನು ಪ್ರವೇಶಿಸಿದರೂ ಶ್ವಾಸಕೋಶಕ್ಕೆ ಏನೂ ಹಾನಿ ಮಾಡದೆ ದೇಹದ ಇನ್ನೊಂದು ಅಂಗಕ್ಕೆ ಖಾಯಿಲೆ ತರುವುದುಂಟು. ಉದಾ: ಕುಷ್ಟರೋಗ (leprosy), ಕೆಪ್ಪಟ್ರಾಯ(mumps), ನೀರುಕೋಟಲೆ (chickenpox)ದಡಾರ (measles).

ನಾವು ತಿನ್ನುವ ಆಹಾರ ಹಾಗೂ ಕುಡಿಯುವ ನೀರಿನಲ್ಲಿಯೂ ಅದೇ ರೀತಿ ನೂರಾರು ಬಗೆಯ ಸೂಕ್ಷ್ಮಜೀವಿಗಳಿವೆ. ಇದನ್ನು ನಾವು ಸೇವಿಸಿದಾಗ ಅವು ಜೀರ್ಣಾಂಗವ್ಯೂಹದ ಮೂಲಕ ನಮ್ಮ ದೇಹವನ್ನು ಪ್ರವೇಶಿಸಿ ನಮಗೆ ಜೀರ್ಣಾಂಗ ವ್ಯೂಹಕ್ಕೆ ಸಂಬಂಧಿಸಿದ ಖಾಯಿಲೆ ಬರುತ್ತದೆ. ಉದಾ:ಕಾಲರಾ, ವಾಂತಿಬೇಧಿ, ಅಮೀಬಿಯಾಸಿಸ್. ಇನ್ನು ಹೆಚ್ಚಿನ ಜಂತುಗಳಿಗಂತೂ ಜೀರ್ಣಾಂಗವ್ಯೂಹವೇ ಪ್ರಮುಖ ಆವಾಸಸ್ಥಾನ. ಜೀರ್ಣಾಂಗ ವ್ಯೂಹದ ಮೂಲಕ ಪ್ರವೇಶಿಸುವ ವರ್ಗದಲ್ಲೂ ಜೀರ್ಣಾಂಗವ್ಯೂಹಕ್ಕೇನೂ ಹಾನಿ ಮಾಡದೇ ಈ ದಾರಿಯಲ್ಲಿ ದೇಹವನ್ನು ಪ್ರವೇಶಿಸಿ ಬೇರೆ ಅಂಗಗಳನ್ನು ಹಾನಿ ಮಾಡುವ ಸೂಕ್ಷ್ಮಜೀವಿಗಳಿವೆ. ಉದಾ: ಇಲಿಜ್ವರ, ಹೆಪಟೈಟಿಸ್-ಎ. ನಾವು ಕುಡಿಯುವ ಹಾಗೂ ತಿನ್ನುವ ಆಹಾರದಲ್ಲಿ ಸೂಕ್ಷ್ಮಜೀವಿಗಳು ಸೇರಿಕೊಳ್ಳುವುದು ಹೇಗೆ? ನಾವು ಹಾಗೂ ಪ್ರಾಣಿಗಳು ವಿಸರ್ಜಿಸಿದ ಮಲದಲ್ಲಿ ಈ ಸೂಕ್ಷ್ಮಜೀವಿಗಳಿರುತ್ತವೆ. ಈ ಮಲವು ನಾವು ಕುಡಿಯುವ ನೀರಿನ ಮೂಲ(ಬಾವಿ/ಕೆರೆ)ವನ್ನು ಸೇರಿಕೊಂಡರೆ (ಉದಾ: ಬಯಲಲ್ಲಿ ವಿಸರ್ಜಿಸಿದ ಮಲವು ಮಳೆಗಾಲದಲ್ಲಿ ಹರಿವ ನೀರಿನೊಂದಿಗೆ ಹರಿದು ಬಾವಿಗೆ, ಕೆರೆಗೆ ಸೇರುವುದು), ಆಗ ಬಾವಿಯ/ಕೆರೆಯ ನೀರಿನಲ್ಲಿ ಈ ಸೂಕ್ಷ್ಮಜೀವಿಗಳು ಸೇರಿಕೊಳ್ಳುತ್ತವೆ. ಇದು ನಾವು ಕುಡಿಯುವ ನೀರಿನ ಮೂಲಕ್ಕೇ ಸೂಕ್ಷ್ಮಜೀವಿಗಳು ಸೇರಿಕೊಳ್ಳುವ ವಿಧಾನ. ಹಾಗೆಯೇ ಮಲ ವಿಸರ್ಜಿಸಿದ ಮೇಲೆ ಕೈತೊಳೆಯದಿದ್ದರೆ ಕೈಯ ಉಗುರಿನೆಡೆಯಲ್ಲಿ ಈ ಜೀವಿಗಳಿರುತ್ತವೆ. ಅದೇ ಕೈಯಲ್ಲಿ ಆಹಾರ ತಯಾರಿಸಿದರೆ ಅಥವಾ ಕುಡಿಯುವ ನೀರಿಗೆ ಕೈ ಮುಳುಗಿಸಿದರೆ ಅಲ್ಲಿಗೆ ಕೈಯ ಉಗುರಿನೆಡೆಯಲ್ಲಿದ್ದ ಸೂಕ್ಷ್ಮಜೀವಿಗಳು ಸೇರಿಕೊಳ್ಳುತ್ತವೆ. ಇದು ನಮ್ಮ ಮನೆಯೊಳಗೆ ಕುಡಿಯುವ ನೀರಿಗೆ ಸೂಕ್ಷ್ಮಜೀವಿಗಳು ಸೇರಿಕೊಳ್ಳುವ ವಿಧಾನ. ಅಂಗಡಿಯಲ್ಲಿ ತರಕಾರಿಯನ್ನು ಎಲ್ಲೆಲ್ಲೋ ಇಟ್ಟಿರಬಹುದು, ಅದಕ್ಕೆ ಮಣ್ಣು ಸೆಗಣಿ ಮೆತ್ತಿರಬಹುದು, ನೊಣ ಕೂತಿರಬಹುದು. ಇಂತಹಾ ಆಹಾರ ಪದಾರ್ಥವನ್ನು ಅದನ್ನು ತೊಳೆಯದೇ ತಿಂದರೆ (ನಿಮ್ಮಊಹೆಗೆಬಿಟ್ಟಿದ್ದೇನೆ). ಹಾಗೆಯೇ ಮನೆಯಲ್ಲೂ ಆಹಾರವನ್ನು ಮುಚ್ಚಿಡದೇ ಇಟ್ಟರೆ ಅದರ ಮೇಲೆ. ನೊಣಗಳು ಕುಳಿತುಕೊಳ್ಳುವವು. ಈ ನೊಣಗಳು ಇದಕ್ಕಿಂತ ಮುಂಚೆ ಯಾವುದೋ ಗಲೀಜಿನ ಮೇಲೆ ಕುಳಿತು ಬಂದವುಗಳು. ಅವುಗಳ ಕಾಲಿನಲ್ಲಿ ಆ ಗಲೀಜು ಅಂಟಿರುತ್ತದೆ. ಆ ನೊಣ ನಮ್ಮ ಆಹಾರದ ಮೇಲೆ ಕುಳಿತಾಗ ಆ ಗಲೀಜಿನೊಂದಿಗೆ ಸೂಕ್ಷ್ಮಜೀವಿಗಳು ನಮ್ಮ ಆಹಾರಕ್ಕೆ ವರ್ಗಾವಣೆಯಾಗುತ್ತವೆ.

ಇನ್ನು ನಮ್ಮ ದೇಹವನ್ನು ಸೂಕ್ಷ್ಮಜೀವಿಗಳು ಪ್ರವೇಶಿಸಲು ಇರುವ ಇನ್ನೊಂದು ಮಾರ್ಗವೆಂದರೆ ಮೂತ್ರವಿಸರ್ಜನೆಯ ಹಾಗೂ ಲೈಂಗಿಕ ಅಂಗಗಳು. ಈ ದಾರಿಯಲ್ಲಿ ಸೂಕ್ಷ್ಮಜೀವಿಗಳು ದೇಹವನ್ನು ಪ್ರವೇಶಿಸುವುದು ಕಡಿಮೆ. ಆ ಭಾಗದ ಶುಚಿತ್ವವನ್ನು ನಿರ್ಲಕ್ಷಿಸಿದವರಲ್ಲಿ ಮತ್ತು ಮೂತ್ರವಿಸರ್ಜನೆಗೆ ಅಡಚಣೆ ಇರುವವರಲ್ಲಿ ಹಾಗೂ ರೋಗ ನಿರೋಧಕ ವ್ಯವಸ್ಥೆ ಸರಿಯಿಲ್ಲದವರಲ್ಲಿ ಈ ಮಾರ್ಗದಲ್ಲಿ ಸೂಕ್ಷ್ಮಜೀವಿಗಳು ದೇಹವನ್ನು ಪ್ರವೇಶಿಸಬಹುದು. ಉದಾ: ಮೂತ್ರಕೋಶದ ಸೋಂಕು. ಅಷ್ಟು ಮಾತ್ರವಲ್ಲದೇ ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ ಅನೇಕ ಖಾಯಿಲೆಗಳು ಈ ದಾರಿಯಲ್ಲಿ ಬರುತ್ತವೆ. ಉದಾ: ಗುಹ್ಯ ರೋಗಗಳು, ಹೆಪಟೈಟಿಸ್ ಬಿ ಹಾಗೂ ಏಡ್ಸ್.

ಹೀಗೆ ನಮ್ಮ ದೇಹವನ್ನು ಪ್ರವೇಶಿಸಿದ ಸೂಕ್ಷ್ಮಜೀವಿಗಳು ಅವುಗಳ ಬೆಳವಣಿಗೆಗೆ ಅನುಕೂಲಕರವಾದ ಅಂಗವನ್ನು ಪ್ರವೇಶಿಸಿದ ಕೂಡಲೆ ಸಂತಾನೋತ್ಪತ್ತಿ ಆರಂಭಿಸುತ್ತವೆ. ಆ ಅಂಗದ ಜೀವಕೋಶ ಹಾಗೂ ಅದರ ಆಹಾರವನ್ನೇ ಬಳಸಿ ತಮ್ಮ ಸಂತಾನವನ್ನು ವೃದ್ಧಿಮಾಡಿಕೊಳ್ಳುವುದರಿಂದ ಅವುಗಳ ಸಂತಾನ ವೃದ್ಧಿಸಿದ ಹಾಗೆ ಆ ಅಂಗಕ್ಕೆ ಹಾನಿಯಾಗುತ್ತದೆ ಹಾಗೂ ಅದರ ಕ್ಷಮತೆ ಕಡಿಮೆಯಾಗುತ್ತದೆ. ಆ ಅಂಗದ ಜೀವಕೋಶಗಳು ಸಾಯುತ್ತವೆ ಹಾಗೂ ಸತ್ತ ಜೀವಕೋಶಗಳು ಸೇರಿ ಅಲ್ಲಿ ಕೀವಾಗುತ್ತದೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322**


## ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನ : ನವರಾತ್ರಿ ಉತ್ಸವ

ಪುತ್ತೂರು ತಾಲೂಕು ಕೋಡಿಂಬಾಡಿ ಮಠದಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ದಿನಾಂಕ 05-10-2013ರಿಂದ 14-10-2013ರವರೆಗೆ ನವರಾತ್ರಿ ಉತ್ಸವಗಳು ವಿವಿಧ ಧಾರ್ಮಿಕ ವಿಧಿಗಳೊಂದಿಗೆ ನೆರವೇರಲಿವೆ. ದಿನಾಂಕ 06-10-2013ರಂದು ಶ್ರೀ ಚಂಡಿಕಾ ಹೋಮವೂ, ಪ್ರತಿದಿನ ಅನ್ನದಾನವೂ ನೆರವೇರಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ದೇವರ ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕೆಂದು ದೇವಳದ ಅಧ್ಯಕ್ಷ ಶ್ರೀ ಟಿ ಅಣ್ಣಪ್ಪಯ್ಯ ತೆಂಕಿಲ ಹಾಗೂ ಕಾರ್ಯದರ್ಶಿ ಶ್ರೀ ಯಂ. ನಾಗೇಶ್ ಶರ್ಮ ಕರೆ ನೀಡಿದ್ದಾರೆ.

## ಬಳ್ಪ ಶ್ರೀ ದುರ್ಗಾಪರಮೇಶ್ವರೀ ಮತ್ತು ಶ್ರೀ ತ್ರಿಶೂಲಿನೀ ದೇವಸ್ಥಾನ : ನವರಾತ್ರಿ ಉತ್ಸವ

ಸುಳ್ಯ ತಾಲೂಕು ಬಳ್ಪದ ಶ್ರೀ ದುರ್ಗಾಪರಮೇಶ್ವರೀ ಮತ್ತು ಶ್ರೀ ತ್ರಿಶೂಲಿನೀ ದೇವಸ್ಥಾನಗಳಲ್ಲಿ ದಿನಾಂಕ 05-10-2013ರಿಂದ 13-10-2013ರವರೆಗೆ ಹಾಗೂ 14-10-2013ರ ವಿಜಯದಶಮಿಯಂದು ಮಹಾ ನವರಾತ್ರಿ ಉತ್ಸವಗಳು ವಿವಿಧ ಧಾರ್ಮಿಕ ವಿಧಿಗಳೊಂದಿಗೆ ನೆರವೇರಲಿವೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶ್ರೀ ದೇವರ ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕೆಂದು ದೇವಳದ ಆಡಳಿತ ಸಮಿತಿಯು ವಿನಂತಿಸಿಕೊಂಡಿದೆ.

### ಕು। ಪೂಜಾ ರಾವ್



ಕುಂದಾಪುರದ ಕಾಮತ್ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿರುವ ಉಡುಪಿ ಕುಂಜಿಬೆಟ್ಟಿನ ಪ್ರೊ। ಸಾಂತೂರು ಸುಬ್ರಹ್ಮಣ್ಯ ರಾವ್ ಹಾಗೂ ಶ್ರೀಮತಿ ವೇದವಲ್ಲಿ ದಂಪತಿಗಳ ಪುತ್ರಿ ಕು। ಪೂಜಾ ರಾವ್ ನವದೆಹಲಿಯ ಸ್ಕೂಲ್ ಆಫ್ ಪ್ಲಾನಿಂಗ್ ಆಂಡ್ ಆರ್ಕಿಟೆಕ್ಚರ್‌ನಲ್ಲಿ ಪದವಿಯನ್ನು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಮುಂದಿನ ಸ್ನಾತಕೋತ್ತರ ಪದವಿಯ ಪ್ರವೇಶಕ್ಕೆ ಅತೀ ಅಗತ್ಯವಿರುವ ಭಾರತದಾದ್ಯಂತ ನಡೆದ GATE ಪರೀಕ್ಷೆಯಲ್ಲಿ 15ನೇ ರ್‍ಯಾಂಕ್ ಪಡೆದಿರುವ ಈಕೆ ಪ್ರಕೃತ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ CISTUPನಲ್ಲಿ ಪ್ರಾಜೆಕ್ಟ್ ಅಸಿಸ್ಟೆಂಟ್ ಆಗಿ ಕರ್ತವ್ಯದಲ್ಲಿದ್ದಾರೆ. ಕು। ಪೂಜಾರ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

### ಶ್ರೇಯಾ



2012-13ನೇ ಸಾಲಿನ 10ನೇ ತರಗತಿ (ಸಿ ಬಿ ಎಸ್ ಸಿ) ಪರೀಕ್ಷೆಯಲ್ಲಿ ಮಂಗಳೂರಿನ ಶಾರದಾ ವಿದ್ಯಾಲಯದ ವಿದ್ಯಾರ್ಥಿನಿ ಕು।ಶ್ರೇಯಾ 9.8 ಗ್ರೇಡ್ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ. ಕಾರ್ಕಳ ಪೆರ್ವಾಜೆ ಶ್ರೀಕಾಂತರಾವ್ ಮತ್ತು ಶ್ರೀಮತಿ ವಿದ್ಯಾರವರ ಪುತ್ರಿಯಾದ ಶ್ರೇಯಾಳ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ವೈದ್ಯಕೀಯ ನೆರವು ವೇದಿಕೆಗೆ ದೇಣಿಗೆ

**ಚೆನ್ನೈಯಲ್ಲಿ ವಾಸ್ತವ್ಯದಲ್ಲಿರುವ ಶ್ರೀಮತಿ ನಿರ್ಮಲಾರಾವ್‌ರವರು ತಮ್ಮ ಪತಿ ದಿ। ಪ್ರೊ। ರಾಮಚಂದ್ರರಾಯರ ನೆನಪಿನಲ್ಲಿ ವೈದ್ಯಕೀಯ ನೆರವು ವೇದಿಕೆಗೆ ರೂ.5,000/- ಧನಸಹಾಯವಿತ್ತಿದ್ದಾರೆ. ಇವರು ಕಳೆದ 4 ವರ್ಷಗಳಿಂದ ಈ ನಿಧಿಗೆ ದೇಣಿಗೆ ನೀಡುತ್ತಿರುವುದನ್ನು ಸಂಘವು ಕೃತಜ್ಞತೆಗಳೊಂದಿಗೆ ಸ್ಮರಿಸಿಕೊಳ್ಳುತ್ತದೆ.**

## ಚೆಂಡುಕಳ ಶ್ರೀ ಸೋಮನಾಥ ದೇವಸ್ಥಾನದಲ್ಲಿ ಶಿಲಾನ್ಯಾಸ

ಚೆಂಡುಕಳ ಶ್ರೀ ಸೋಮನಾಥ ದೇವಸ್ಥಾನದ ನೂತನ ಕಟ್ಟಡಗಳ ಶಿಲಾನ್ಯಾಸವು ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಪರಮಾನುಗ್ರಹದೊಂದಿಗೆ ಶ್ರೀ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಸದಸ್ಯರು ಹಾಗೂ ಊರಪರವೂರ ಭಕ್ತರ ಉಪಸ್ಥಿತಿಯಲ್ಲಿ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ಮಾರ್ಗದರ್ಶನದಲ್ಲಿ ದಿನಾಂಕ 23-08-2013ರಂದು ನೆರವೇರಿತು.

**- ಡಾ। ಚೆಂಡುಕಳ ರಮೇಶ ರಾವ್**




**2012-13 ನೇ ಸಾಲಿನ 'ಪ್ರಥಮ ಅತ್ಯುತ್ತಮ ಕ್ಲಬ್' ಪ್ರಶಸ್ತಿಯನ್ನು 'ಲಯನೆಸ್ ಕ್ಲಬ್, ಮಂಗಳೂರು' ಪಡೆದುಕೊಂಡಿದೆ. ಲಯನ್ಸ್ ಗವರ್ನರ್ ಎಂ.ಬಿ. ಸದಾಶಿವ ಮತ್ತು ಗೀತಾ ಆರ್. ಶೆಟ್ಟಿಯವರು ಲಯನೆಸ್ ಅಧ್ಯಕ್ಷೆ ಗಾಯತ್ರಿ ಅರವಿಂದ ರಾವ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು.**




**2012-13 ನೇ ಸಾಲಿನ 'ಪ್ರಥಮ ಅತ್ಯುತ್ತಮ ಕ್ಲಬ್' ಪ್ರಶಸ್ತಿಯನ್ನು 'ಲಯನ್ಸ್ ಕ್ಲಬ್, ಮಂಗಳೂರು' ಪಡೆದುಕೊಂಡಿದೆ. ಲಯನ್ಸ್ ಗವರ್ನರ್ ಅವರು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕ್ಲಬ್ಬಿನ ಅಧ್ಯಕ್ಷ ಡಾ। ಕೇದಿಗೆ ಅರವಿಂದ ರಾವ್, ಕಾರ್ಯದರ್ಶಿ ನಾಗರಾಜ ಶರ್ಮ, ಕೋಶಾಧಿಕಾರಿ ಎಚ್. ರಘುವೀರ ರಾವ್ ಅವರಿಗೆ 2012-13ನೇ ಸಾಲಿನ ಅತ್ಯುತ್ತಮ ಜಿಲ್ಲಾ ಅಧ್ಯಕ್ಷ, ಅತ್ಯುತ್ತಮ ಜಿಲ್ಲಾ ಕಾರ್ಯದರ್ಶಿ ಹಾಗೂ ಅತ್ಯುತ್ತಮ ಜಿಲ್ಲಾ ಕೋಶಾಧಿಕಾರಿ ಪ್ರಶಸ್ತಿ ನೀಡಿ ಗೌರವಿಸಿದರು.**

### ಮಾ। ಅಮಿತೇಶ್ ಸಿ. ರಾವ್



ಸತತ ಹಲವು ವರ್ಷಗಳಿಂದ ಭಾರತದಾದ್ಯಂತ ನಡೆಯುವ "ಅಬಾಕಸ್ ಮೆಂಟಲ್ ಅರ್ಥಮೆಟಿಕ್" ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಸಾಧನೆ ಗೈದಿರುವ ಮಾ। ಅಮಿತೇಶ್ ಸಿ. ರಾವ್ 2013ರಲ್ಲಿ ಮುಂಬೈನಲ್ಲಿ ನಡೆದ Sixth Level ಸ್ಪರ್ಧೆಯಲ್ಲಿ ಭಾಗವಹಿಸಿ **ಚಾಂಪಿಯನ್ ಆಫ್ ಚಾಂಪಿಯನ್ ಪ್ರಶಸ್ತಿ**ಯನ್ನು ತನ್ನದಾಗಿಸಿಕೊಂಡಿದ್ದಾನೆ. ಕಳೆದ ಕೆಲವು ವರ್ಷಗಳಿಂದ ಈ ಸಾಧನೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವ ಅಮಿತೇಶ್ ನಾಸಿಕ್‌ನ ಸಿಲ್ವರ್‌ಓಕ್ ಯುನಿವರ್ಸಲ್ ಸ್ಕೂಲ್‌ನ 7ನೇ ತರಗತಿಯ ವಿದ್ಯಾರ್ಥಿ. ನಾಸಿಕ್‌ನಲ್ಲಿ ಉದ್ಯೋಗಿಯಾಗಿರುವ ಕಾಪು ಕರಂದಾಡಿ ಶ್ರೀ ಚಂದ್ರಶೇಖರ ರಾವ್ ಹಾಗೂ ಶ್ರೀಮತಿ ಭಾರತಿ ದಂಪತಿಗಳ ಪುತ್ರನಾದ ಅಮಿತೇಶ್‌ನ ಸಾಧನೆಗೆ ಶ್ರೀ ಶಾರದಾ ಅಭಿನಂದನೆಗಳು.

## ಕುಂಜಿಬೆಟ್ಟು: ವರಮಹಾಲಕ್ಷ್ಮೀ ವ್ರತ ಆಚರಣೆ

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ಇದರ ಮಹಿಳಾ ವೇದಿಕೆಯ ವತಿಯಿಂದ ಸಾಮೂಹಿಕ ವರಮಹಾಲಕ್ಷ್ಮೀ ವ್ರತ ಪೂಜಾ ಕಾರ್ಯಕ್ರಮವು ತಾ.06-08-2013ನೇ ಮಂಗಳವಾರ ಸಾಯಂಕಾಲ 4-30ರಿಂದ ನೆರವೇರಿತು. ಶ್ರೀ ನಾಗಭೂಷಣ ಶಾಸ್ತ್ರಿಯವರು ನಡೆಸಿಕೊಟ್ಟ ಪೂಜಾ ಕಾರ್ಯಕ್ರಮದ ಕರ್ತೃಗಳಾಗಿ ಶ್ರೀ ಜಿ.ಕೆ.ಕೋಲ್ಪೆ ದಂಪತಿಗಳು ಭಾಗವಹಿಸಿದ್ದರು. ನಮ್ಮ ಸಮಾಜ ಬಾಂಧವರಲ್ಲದೆ ಆಸುಪಾಸಿನ ಅನೇಕ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಜೆ ಗಂಟೆ 7-30ಕ್ಕೆ ಪೂಜೆಯು ನಡೆದು, ಪ್ರಸಾದವನ್ನು ವಿತರಿಸಲಾಯಿತು.

## ಏಕಾದಶ ರುದ್ರ

ಶ್ರೀಯುತ ಬಿ.ವಾಸುದೇವ ರಾವ್ ದಂಪತಿಗಳು ಮತ್ತು ಮಕ್ಕಳು ಕುಂಜಿಬೆಟ್ಟಿನ ಶ್ರೀಶಾರದಾ ದೇವಸ್ಥಾನದಲ್ಲಿ ತಾ.23-06-2013 ರಂದು ಪ್ರತಿ ವರ್ಷದಂತೆ ಏಕಾದಶ ರುದ್ರಪೂಜೆಯನ್ನು ನೆರವೇರಿಸಿದರು. ಪೂಜೆಯ ನಂತರ ಬ್ರಾಹ್ಮಣ ಸುವಾಸಿನೀ ಆರಾಧನೆಯು ನೆರವೇರಿತು.

### ತ್ರಿವಳಿ ಸಾಧನೆಗೈದ ಕುಮಾರಿ ಪ್ರೀತಿಕಾ ಪಿಲಿಂಜ



2012-13ನೇ ಸಾಲಿನ ಕಾನೂನು ಸ್ನಾತಕೋತ್ತರ ಪದವಿ (ವಾಣಿಜ್ಯ ಕಾನೂನು) ವಿಭಾಗದಲ್ಲಿ ಕು। ಪ್ರೀತಿಕಾ ಪಿಲಿಂಜ ಇವರು ಪ್ರಥಮರ‍್ಯಾಂಕ್ ಹಾಗೂ ಎರಡುಚಿನ್ನದ ಪದಕ ಗಳಿಸಿರುತ್ತಾರೆ. ಇತ್ತೀಚೆಗೆ ಬೆಂಗಳೂರಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾನಿಲಯದಲ್ಲಿ ನಡೆದ 21ನೇ ಘಟಿಕೋತ್ಸವದಲ್ಲಿ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಾಧೀಶರಾದ ಶ್ರೀ ಸೇತುಸಿವಂ ಅವರಿಂದ ಪದವಿ ಹಾಗೂ ಚಿನ್ನದ ಪದಕಗಳನ್ನು ಇವರು ಸ್ವೀಕರಿಸಿದರು. ಪೂರ್ವದ ಹಾರ್ವರ್ಡ್ (HARWARD OF THE EAST) ಎಂದೇ ಕರೆಯಲ್ಪಡುವ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ (National Law School) ದೇಶದ ಅತ್ಯುತ್ತಮ ಕಾನೂನು ಶಾಲೆಗಳಲ್ಲಿ ಒಂದು. ಇದರ ಪ್ರವೇಶಾತಿ ಪರೀಕ್ಷೆಯಲ್ಲೂ ಪ್ರೀತಿಕಾರವರು ರಾಜ್ಯಮಟ್ಟದಲ್ಲಿ ಪ್ರಥಮ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ 7ನೇ ರ‍್ಯಾಂಕ್ ಗಳಿಸಿದ್ದರು.

ಕು। ಪ್ರೀತಿಕಾರವರು ಬಿ.ಎ. (ಕಾನೂನು) ಹಾಗೂ ಎಲ್.ಎಲ್.ಬಿ. [ಎಸ್.ಡಿ.ಎಂ. ಕಾನೂನು ಕಾಲೇಜ್, ಮಂಗಳೂರು] ಪದವಿಗಳಲ್ಲೂ ಪ್ರಥಮ ರ‍್ಯಾಂಕ್ ಹಾಗೂ ಚಿನ್ನದ ಪದಕ ಗಳಿಸಿದ್ದರು. ಅಲ್ಲದೇ ತ್ರಿಶೂರಿನಲ್ಲಿ ನಡೆದಿದ್ದ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ "ಭಾರತದ ಎರಡನೇ ಅತ್ಯುತ್ತಮ ಮಹಿಳಾ ವಕೀಲೆ" ಸೇರಿದಂತೆ ಹಲವು ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲೂ ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

ಪ್ರಸ್ತುತ, ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (H.A.L.) ಬೆಂಗಳೂರು ಇಲ್ಲಿನ ಕಾನೂನು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಪ್ರತಿಭಾನ್ವಿತೆ ಪುತ್ತೂರಿನಲ್ಲಿರುವ ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿ ಶ್ರೀ ತುಲಸೀದಾಸ್ ಪಿಲಿಂಜ ಹಾಗೂ ಶ್ರೀಮತಿ ಸಾವಿತ್ರಿ ಪಿಲಿಂಜರವರ ಪುತ್ರಿ. ಈಕೆಯ ಸಹೋದರಿ ಕು। ದೀಪಿಕಾ ಪಿಲಿಂಜ (ಬಿ.ಕಾಂ. ಪದವೀಧರೆ) ಪ್ರಸ್ತುತ ಕರ್ನಾಟಕ ಬ್ಯಾಂಕಿನ ತುಮಕೂರು ಶಾಖೆಯಲ್ಲಿ ಉದ್ಯೋಗಕ್ಕೆ ಸೇರ್ಪಡೆಗೊಂಡಿದ್ದಾರೆ. ಕು। ಪ್ರೀತಿಕಾರವರ ಈ ಸಾಧನೆಗೆ ಶ್ರೀ ಶಾರದಾ ಬಳಗದ ಅಭಿನಂದನೆಗಳು.


**-ಶ್ರೀಮತಿ ಜಯಲಕ್ಷ್ಮೀ ಮುರಲೀಕೃಷ್ಣರಾವ್**

## ಕೃಷ್ಣ ಪರಮಾತ್ಮ ತೋರಿಸಿದ ದಾರಿಯಲ್ಲಿ ಮುನ್ನಡೆಯಿರಿ

"ಶ್ರೀಕೃಷ್ಣ ಜನ್ಮಾಷ್ಟಮಿಯ ಈ ಶುಭದಿನದಂದು ಇಲ್ಲಿ ನೂರಾರು ಚಿಣ್ಣರು ಶ್ರೀಕೃಷ್ಣನ ವೇಷದಲ್ಲಿ ಬಂದಿದ್ದಾರೆ. ಕುತ್ಯಾಳ ಇಂದು ನಂದಗೋಕುಲವಾಗಿ ಕಾಣಿಸುತ್ತಿದೆ. ಈ ಬಾಲಕ-ಬಾಲಕಿಯರೆಲ್ಲರೂ ಮುಂದೆ ಶ್ರೀಕ್ರಷ್ಣನು ಭಗವದ್ಗೀತೆಯಲ್ಲಿ ತೋರಿಸಿರುವ ಸನ್ಮಾರ್ಗದಲ್ಲೇ ಮುನ್ನಡೆದರೆ ಜೀವನದಲ್ಲಿ ಯಶಸ್ಸು, ಸುಖ, ಸಂತೋಷ ತಾನಾಗಿ ಬರುತ್ತದೆ. ಈ ನಿಟ್ಟಿನಲ್ಲಿ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಮಾತೆಯರೆಲ್ಲರಲ್ಲೂ ಇದೆ" ಎಂದು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಅನುವಂಶಿಕ ಮೊಕ್ತೇಸರ ಕೆ.ಜಿ.ಶ್ಯಾನುಬೋಗ್ ಹೇಳಿದರು. ಅವರು ಕುತ್ಯಾಳ ಶ್ರೀ ಗೋಪಾಲ ಕೃಷ್ಣ ದೇವಾಸ್ಥಾನದ ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವದ ಸಮಾರೋಪ ಸಮಾರಂಭದ ಧಾರ್ಮಿಕ ಸಭೆಯ ಅಧ್ಯಕ್ಷತೆ ವಹಿಸಿ, ಮುದ್ದು ಕೃಷ್ಣ ವೇಷ ಸ್ಪರ್ಧಾ ವಿಜೇತರಿಗೆ ಬಹುಮಾನ ನೀಡುತ್ತಾ ಮಾತನಾಡಿದರು. ವಿಷ್ಣು ಅಸ್ರ ಅವರು ಆಶೀರ್ವಚನ ಗೈದರು. ಉದ್ಯಮಿ ಕೆ.ಸುರೇಶ್ ಉಪಸ್ಥಿತರಿದ್ದರು. ಶ್ರೀಕೃಷ್ಣ ಜನ್ಮಾಷ್ಟಮಿ ಉತ್ಸವ ಕಮಿಟಿಯ ಕಾರ್ಯದರ್ಶಿ ವಿಷ್ಣು ಶ್ಯಾನುಬೋಗ್ ಸ್ವಾಗತಿಸಿದರು. ಜಗದೀಶ್ ಕೂಡ್ಲು ವಂದಿಸಿದರು. ಅನಂತರ ಸಾರ್ವಜನಿಕ ಸತ್ಯನಾರಾಯಣ ಪೂಜೆ ನಡೆಯಿತು. ಮಧ್ಯರಾತ್ರಿ ಶ್ರೀಕೃಷ್ಣನ ಜನನದ ಆಚರಣೆ ಪೂಜಾ ಕಾರ್ಯಕ್ರಮಕ್ಕೆ ಭಕ್ತರು ಸಾಕ್ಷಿಯಾದರು.

**-ಕೆ.ಜಿ.ಶ್ಯಾನುಬೋಗ್**

## ಸಮಾಜಬಾಂಧವರಿಂದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಗಳ ಭೇಟಿ



ಶೃಂಗೇರಿಯಲ್ಲಿ ಚಾತುರ್ಮಾಸ್ಯ ವ್ರತದಲ್ಲಿ ಇರುವ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರನ್ನು ಸಮಾಜ ಬಾಂಧವರು ತಾ.25-08-2013ರಂದು ಭೇಟಿಮಾಡಿ ಆಶೀರ್ವಾದ ಪಡೆದರು. ಸಮಾಜ ಬಾಂಧವರ ಶೃಂಗೇರಿ ಶ್ರೀಗಳ ಭೇಟಿಯ ಈ ಸಮಯದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳೂ ತಮ್ಮ ಚಾತುರ್ಮಾಸ್ಯ ವ್ರತದಲ್ಲಿ ಅಲ್ಲಿರುವುದರಿಂದ ಸಮಾಜಬಾಂಧವರಿಗೆ ಅವರನ್ನೂ ಭೇಟಿ ಮಾಡುವ ಅವಕಾಶ ಲಭ್ಯವಾಗಿರುತ್ತದೆ. ಸ್ವಾಮೀಜಿಯವರು ಆಗಮಿಸಿರುವ ಎಲ್ಲರನ್ನೂ ಕಂಡು ಸಂತೋಷಗೊಂಡದ್ದಲ್ಲದೆ, ತಮ್ಮ ಮಾತುಗಳಿಂದ ಹರಸಿದರು.

ಶ್ರೀ ಶ್ರೀಗಳು ತಾ.20-09-2013ರಂದು ಶೃಂಗೇರಿಯಿಂದ ಹೊರಟು ಬೆಂಗಳೂರಿನ ಕೋಡಿಗೆಹಳ್ಳಿಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಭೇಟಿ ನೀಡಿ ಅಲ್ಲಿಯೇ ಸ್ವಲ್ಪ ಸಮಯ ವಾಸ್ತವ್ಯವಿರುವರು.

## ವೈವಾಹಿಕ ಜೀವನದ ಸುವರ್ಣ ಮಹೋತ್ಸವ



ನಮ್ಮ ಪೂಜ್ಯರಾದ ಶ್ರೀಮತಿ ವಿಮಲಾ ಮತ್ತು ಶ್ರೀ ಬೈಕಾಡಿ ದೇವರಾವ್ ಇವರು ತಮ್ಮ ವೈವಾಹಿಕ ಜೀವನದ ಸುವರ್ಣ ಮಹೋತ್ಸವವನ್ನು ಬಂಧುಬಾಂಧವರೊಂದಿಗೆ ತಾ.18-08-2013ನೇ ಆದಿತ್ಯವಾರ ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ನೆರವೇರಿಸಿದರು. ಧಾರ್ಮಿಕ ಕಾರ್ಯಕ್ರಮದ ನಂತರ ಮೊಮ್ಮಕ್ಕಳಾದ ಕು। ಅಪೇಕ್ಷಾ ಉಪಾಧ್ಯಾಯ ಮತ್ತು ಕು। ಆಕಾಂಕ್ಷಾ ಕ್ರಮವಾಗಿ ಶಾಸ್ತ್ರೀಯ ನೃತ್ಯ ಹಾಗೂ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟು ಆಗಮಿಸಿದ್ದ ಬಂಧುಬಾಂಧವರ ಮನಸೂರೆಗೊಂಡರು.

ಶ್ರೀ ದೇವರಾಯರು ನಾಸಿಕದಲ್ಲಿರುವ ಗೋಖಲೆ ವಿದ್ಯಾಸಂಸ್ಥೆಯ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಮುಂದೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ಪದವಿಯೊಂದಿಗೆ ಅದೇ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆಗೆ ಸೇರಿ ಪದೋನ್ನತಿ ಹೊಂದುತ್ತಾ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ನಿವೃತ್ತಿಯ ನಂತರ ಅದೇ ವಿದ್ಯಾಸಂಸ್ಥೆಯ ವಿಭಾಗೀಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀ ಕಾಮೇಶ್ವರಾನುಗ್ರಹದಿಂದ ದಂಪತಿಗಳು ಆಯುರಾರೋಗ್ಯ ನೆಮ್ಮದಿಯಿಂದ ಸಮಾಜಸೇವೆ ಮಾಡುತ್ತಾ ತಮ್ಮ ವೈವಾಹಿಕ ಜೀವನದ ವಜ್ರಮಹೋತ್ಸವವನ್ನು ಆಚರಿಸುವಂತಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತಾ,

ಶುಭ ಹಾರೈಸುವ

**ಶ್ರೀಮತಿ ಮತ್ತು ಶ್ರೀ ಡಾ। ಬೈಕಾಡಿ ಸೂರ್ಯನಾರಾಯಣ ರಾವ್**

**ಶ್ರೀಮತಿ ವಿದ್ಯಾ, ಶ್ರೀಮತಿ ಪ್ರೀತಿ, ಶ್ರೀ ಹರ್ಷ**




ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Buying and selling shares as easy as checking your emails

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
Harikrishna Digitals
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102


### ಭಾವಪೂರ್ಣ ಶ್ರದ್ಧಾಂಜಲಿ



ಜನನ : 29-08-1935 | ಮರಣ : 04-09-2013

**ನಂದಳಿಕೆ ಸದಾನಂದ ರಾವ್**

"ಸಾಯಿರಾಧಾ ಗೋಕುಲ್‌ಧಾಮ್", 004 ಇ-ವಿಂಗ್, ಬೈಲಕೆರೆ, ಉಡುಪಿ-576 101.

ನಮ್ಮೆಲ್ಲರ ಬಾಳಿಗೆ ಬೆಳಕಾಗಿ, ಸಹೃದಯ ಸಾರ್ಥಕ ಬಾಳನ್ನು ನಡೆಸಿ, ಸದ್ಗುಣಗಳಿಂದ ಎಲ್ಲರಿಗೂ ಆದರಣೀಯರಾಗಿ ಇದೀಗ ನಮ್ಮನ್ನಗಲಿದ ನಿಮ್ಮ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ,

ಶ್ರೀಮತಿ ಗೀತಾ (ಪತ್ನಿ)
ಶ್ರೀ ಶ್ರೀನಿವಾಸ ಪ್ರಸಾದ್ ಮತ್ತು ಶ್ರೀಮತಿ ದೀಪಾ
ಶ್ರೀಮತಿ ಗಾಯತ್ರಿ ಮತ್ತು ಶ್ರೀ ಯೋಗಿಶ್ ರಾವ್
ಶ್ರೀಮತಿ ಸ್ನೇಹಾ ಮತ್ತು ಶ್ರೀ ಮಹೇಶ್ ಶ್ಯಾನುಭೋಗ್
ಮತ್ತು ಮೊಮ್ಮಕ್ಕಳು


Celebrations
Conference & Party Hall (Air Conditioned)



Prop. : ADARSH RAO

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ಪ್ರೊ : ಸುಧಾಕರ್ ರಾವ್ ಬೆಳ್ಳೆ
ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ, ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093


Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org